# ಕುಟುಂಬ ವ್ಯವಸ್ಥೆ ಕುರ್‌ಆನಿನಲ್ಲಿ

ಡಾ. ಸೈಯದ್ ಜಲಾಲುದ್ದೀನ್ ಉಮರಿ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

## ಪ್ರಕಾಶಕರ ಮಾತು

ಕುಟುಂಬವು ಸಮಾಜದ ಮೂಲಾಧಾರವಾಗಿದೆ. ಕುಟುಂಬಗಳು ಸೇರಿಯೇ ಸಮಾಜ ನಿರ್ಮಾಣವಾಗುತ್ತದೆ. ಆದರ್ಶ ಕುಟುಂಬಗಳಿಂದ ಆದರ್ಶ ಸಮಾಜವೂ ಅಸ್ತಿತ್ವಕ್ಕೆ ಬರುತ್ತದೆ. ಅದರಿಂದ ದೇಶಕ್ಕೂ ಹಿತವಿದೆ. ಕುಟುಂಬ ಎಷ್ಟು ಸುಭದ್ರವಾಗಿರುವುದೋ ಅಷ್ಟೇ ಸಮಾಜವೂ ಸುಭದ್ರವಾಗಿರುವುದು. ಆದರೆ ಇಂದು ಕುಟುಂಬ ವ್ಯವಸ್ಥೆಯನ್ನೇ ಛಿದ್ರಗೊಳಿಸುವ ಪ್ರಕ್ರಿಯೆಗಳು ನಡೆಯುತ್ತಿರುವುದನ್ನು ನಾವು ಕಾಣುತ್ತೇವೆ. ಹೊಣೆಗಾರಿಕೆಯಿಂದ ನುಣುಚಿಕೊಳ್ಳಲಿಕ್ಕಾಗಿ ಸಲಿಂಗ ರತಿ, ಅವಿವಾಹಿತ ಜೋಡಿಗಳ ಕಲ್ಪನೆಯು ಸಮಾಜದಲ್ಲಿ ಹರಡುತ್ತಿದೆ.

ಪತಿ-ಪತ್ನಿ ಮತ್ತು ಮಕ್ಕಳ ಸಂಸಾರವೇ ಕುಟುಂಬ. ಅದರಲ್ಲಿ ಪತಿ-ಪತ್ನಿಯರ ಸಂಬಂಧಿಕರೂ ಸೇರಿದರೆ ಕುಟುಂಬವು ದೊಡ್ಡದಾಗುತ್ತದೆ. ಪತಿಯು ಮನೆಯ ಯಜಮಾನ. ಪತ್ನಿ ಮಕ್ಕಳ ಪಾಲನೆ-ಪೋಷಣೆಯ ಹೊಣೆಗಾರಿಕೆ ಅವನ ಮೇಲಿದೆ. ಪತ್ನಿಯು ಅವನಿಗೆ ವಿಧೇಯಳಾಗಿದ್ದು ಮಕ್ಕಳ ಶಿಕ್ಷಣ-ತರಬೇತಿಯ ಜವಾಬ್ದಾರಳಾಗಿದ್ದಾಳೆ. ಇಬ್ಬರೂ ತಂತಮ್ಮ ಕರ್ತವ್ಯಗಳನ್ನು ನಿರ್ವಹಿಸಿದರೆ ಕುಟುಂಬದಲ್ಲಿ ಶಾಂತಿ-ನೆಮ್ಮದಿ ನೆಲೆಸುವುದು.

ಇಸ್ಲಾಮ್ ಶಾಂತಿ-ನೆಮ್ಮದಿಯ ಕುಟುಂಬ ವ್ಯವಸ್ಥೆಯನ್ನು ಬಯಸುತ್ತದೆ. ಪವಿತ್ರ ಕುರ್‌ಆನಿನಲ್ಲಿ ಆದರ್ಶ ಕುಟುಂಬದ ರೂಪು ರೇಷೆಗಳ ಸವಿಸ್ತಾರ ಪ್ರಸ್ತಾಪವಿದೆ. ಕುಟುಂಬ ವ್ಯವಸ್ಥೆಯ ವಿವಿಧ ಮಗ್ಗುಲುಗಳನ್ನು ''ಕುಟುಂಬ ವ್ಯವಸ್ಥೆ ಕುರ್‌ಆನಿನಲ್ಲಿ.'' ಎಂಬ ಈ ಪುಟ್ಟ ಕೃತಿಯಲ್ಲಿ ಜಮಾಅತೆ ಇಸ್ಲಾಮೀ ಹಿಂದ್‌ನ ರಾಷ್ಟ್ರೀಯ ಅಧ್ಯಕ್ಷರಾದ ಮೌಲಾನಾ ಸೈಯದ್ ಜಲಾಲುದ್ದೀನ್ ಉಮರಿಯವರು ಪ್ರಸ್ತುತ ಪಡಿಸಿದ್ದಾರೆ. ಕುಟುಂಬ ವ್ಯವಸ್ಥೆಯ ಕುರಿತು ಆಧುನಿಕ ಲೋಕವು ಎದುರಿಸುತ್ತಿರುವ ಸಮಸ್ಯೆಗಳಿಗೆ ಇದರಲ್ಲಿ ಪರಿಹಾರವಿದೆ. ಇದರ ಅಧ್ಯಯನವು ಈ ವಿಷಯದಲ್ಲಿ ಹೆಚ್ಚಿನ ಅಧ್ಯಯನಕ್ಕೆ ಸಹಾಯಕವಾಗಲಿ ಎಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

## ಅನುಕ್ರಮಣಿಕೆ

ಮುನ್ನುಡಿ .................................................. 05

ಕುಟುಂಬ- ಸಾಮೂಹಿಕ ಜೀವನದ ಪ್ರಪ್ರಥಮ ಸಂಸ್ಥೆ.................... 06

ಇಸ್ಲಾಮ್ ಕುಟುಂಬ ವ್ಯವಸ್ಥೆಯನ್ನು ಭದ್ರಪಡಿಸಿದೆ ....................... 06

ವೈರಾಗ್ಯ ಮತ್ತು ಸ್ವಚ್ಛಂದತೆಗಳ ಮಧ್ಯೆ ಸಂತುಲಿತ ಮಾರ್ಗ ..................... 07

ನಿಕಾಹ್‌ನ ಉದ್ದೇಶ.................................................. 08

ಪತಿ ಪತ್ನಿಯರು ಪರಸ್ಪರರ ನೆಮ್ಮದಿಯ ಮೂಲ ............................ 09

ಇಸ್ಲಾಮ್ ಪುರುಷನನ್ನು ಕುಟುಂಬದ ಮುಖ್ಯಸ್ಥನನ್ನಾಗಿ ಮಾಡಿದೆ ................. 10

ಮಹಿಳೆಯರನ್ನು ಅನ್ಯಾಯ ಅಕ್ರಮಗಳಿಂದ ರಕ್ಷಿಸುವ ಮಾರ್ಗೋಪಾಯಗಳು..... 12

ಬಹುಪತ್ನಿತ್ವದ ಅನುಮತಿ ............................................ 13

ದಾಂಪತ್ಯ ಸಂಬಂಧ ಕೆಡಲಾರಂಭಿಸಿದರೆ .................................. 14

ತಲಾಕ್‌ನ ಅವಕಾಶ ................................................ 15

3 ತಲಾಕ್‌ನ ಸಮಸ್ಯೆ.................................................. 16

ಮಕ್ಕಳ ಪೋಷಣೆ, ಶಿಕ್ಷಣ, ತರಬೇತಿಯ ಹೊಣೆಗಾರಿಕೆ
ತಂದೆ-ತಾಯಿಗಳಿಬ್ಬರ ಮೇಲೂ ಇದೆ ....................................... 17

ಮಕ್ಕಳ ಹತ್ಯೆಗೆ ಯಾವುದೇ ಅವಕಾಶವಿಲ್ಲ ................................... 19

ತಂದೆ-ತಾಯಿಗಳ ಹಕ್ಕುಗಳು............................................ 20

ವೃದ್ಧಾಶ್ರಮಗಳು.................................................... 21

ರಕ್ತ ಸಂಬಂಧಿಗಳಿಗೆ ಗೌರವ ........................................... 21

ವಾರೀಸು ಕಾನೂನು ................................................. 22

ವಸೀಯತ್‌ನ ಹಕ್ಕು ................................................. 23

ಉಪಸಂಹಾರ ...................................................... 24

# ಮುನ್ನುಡಿ

'ಕುಟುಂಬ ವ್ಯವಸ್ಥೆ ಮತ್ತು ಕುರ್‌ಆನಿನ ಶಿಕ್ಷಣ' ಎಂಬ ವಿಷಯದಲ್ಲಿ ಒಂದು ವಿಚಾರಗೋಷ್ಠಿ 2009ರ ನವೆಂಬರ್ 20-21ರಂದು ಅಲೀಗಢದ 'ಇದಾರಃ ಉಲೂಮೆ ಕುರ್‌ಆನ್' ಎಂಬ ಸಂಸ್ಥೆಯ ಅಧೀನದಲ್ಲಿ ನಡೆದಿತ್ತು. ಅದರ ಉದ್ಘಾಟನಾ ಅಧಿವೇಶನದಲ್ಲಿ ಮುಖ್ಯ ಭಾಷಣ ಮಾಡಲು ನನ್ನನ್ನು ಕರೆದಿದ್ದರು. ಆ ಸಂದರ್ಭದಲ್ಲಿ ಅಗತ್ಯ ಟಿಪ್ಪಣಿಯ ಆಧಾರದಲ್ಲಿ ಮಾಡಿದ ಭಾಷಣವನ್ನು ನಂತರ ಡಾ। ರಝಿಯುಲ್ ಇಸ್ಲಾಮ್ ನದ್ವಿಯವರು(ಕಾರ್ಯದರ್ಶಿ, ಗ್ರಂಥ ರಚನಾ ಅಕಾಡೆಮಿ, ನವದೆಹಲಿ.) ಪುಸ್ತಕ ರೂಪದಲ್ಲಿ ತಂದು ಅದರ ಉಪಶೀರ್ಷಿಕೆಗಳನ್ನು ರಚಿಸಿದರು. ಇದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ನಾನು ಅದನ್ನು ಪರಿಶೀಲಿಸಿದ್ದೇನೆ. ಕೆಲವು ತಿದ್ದುಪಡಿಗಳೊಂದಿಗೆ ಅದಕ್ಕೆ ಲೇಖನದ ರೂಪ ಕೊಡಲಾಯಿತು. ಈ ಲೇಖನ ಅಲೀಗಢದ ತಹ್‌ಕೀಕಾತೆ ಇಸ್ಲಾಮಿ ತ್ರೈಮಾಸಿಕ (ಜನವರಿ -ಮಾರ್ಚ್ 2010)ದಲ್ಲಿ ಪ್ರಕಟವಾಗಿದೆ.

ಈಗ ಅದೇ ಲೇಖನ ಇನ್ನೂ ಹೆಚ್ಚು ಸುಧಾರಣೆಯೊಂದಿಗೆ ಪುಸ್ತಕದ ರೂಪದಲ್ಲಿ ಪ್ರಸ್ತುತ ಪಡಿಸಲಾಗುತ್ತಿದೆ. ಇದರಲ್ಲಿ ಕುಟುಂಬದ ಬಗ್ಗೆ ಕುರ್‌ಆನಿನ ಶಿಕ್ಷಣದ ಒಂದು ಸಾರಾಂಶ ಬಂದಿದೆ. ಇಸ್ಲಾಮೀ ಕುಟುಂಬ ವ್ಯವಸ್ಥೆಯ ಕುರಿತು ತಿಳಿಯಲು ಈ ಕೃತಿಯು ಪ್ರಯೋಜನಕಾರಿಯಾಗಬಹುದೆಂದು ನಿರೀಕ್ಷಿಸುತ್ತೇನೆ. ಕುಟುಂಬದ ವಿಷಯದಲ್ಲಿ ಇಸ್ಲಾಮೀ ಶಿಕ್ಷಣದ ಕುರಿತು ನನ್ನ ಹಲವು ಪುಸ್ತಕಗಳು ಪ್ರಕಟಗೊಂಡಿವೆ. ವಿವರವಾದ ಅಧ್ಯಯನಕ್ಕೆ ಅವುಗಳಿಂದ ಪ್ರಯೋಜನ ಪಡೆಯಬಹುದು. ಅಲ್ಲಾಹನು ಈ ಪ್ರಯತ್ನವನ್ನು ಸ್ವೀಕರಿಸಲಿ ಎಂದು ಪ್ರಾರ್ಥಿಸುತ್ತೇನೆ.

ಜಲಾಲುದ್ದೀನ್ ಉಮರಿ

**1 ನವೆಂಬರ್ 2012**

# ಕುರ್‌ಆನಿನ ಕುಟುಂಬ ವ್ಯವಸ್ಥೆ

## ಕುಟುಂಬ- ಸಾಮೂಹಿಕ ಜೀವನದ ಪ್ರಪ್ರಥಮ ಸಂಸ್ಥೆ

ಮನುಷ್ಯ ಸಂಘ ಜೀವಿ ಎಂಬುದು ನಮಗೆಲ್ಲರಿಗೂ ತಿಳಿದಿದೆ. ಸಮಾಜದೊಂದಿಗೆ ಇರುವ ಬಯಕೆ ಅವನ ಸ್ವಭಾವದಲ್ಲಿಯೇ ಇದೆ.ಅವನು ಇತರರೊಂದಿಗೆ ಕೂಡಿ ಬಾಳುವುದು ಅವನ ಅವಶ್ಯಕತೆಗಳ ಬೇಡಿಕೆಯೂ ಆಗಿದೆ. ಅಲ್ಲಾಹನು ಮನುಷ್ಯನನ್ನು ಸೃಷ್ಟಿಸಿದ ರೀತಿಯಲ್ಲಿ ಅವನು ಏಕಾಂಗಿಯಾಗಿ ತನ್ನ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಿಲ್ಲ, ಬಹಳಷ್ಟು ಜನರು ಸೇರಿ ಅವನ ಅವಶ್ಯಕತೆಗಳನ್ನು ಪೂರೈಸುತ್ತಾರೆ. ಕುಟುಂಬ ಈ ಸಾಮೂಹಿಕ ಜೀವನದ ಪ್ರಪ್ರಥಮ ಮತ್ತು ಮೂಲಭೂತ ಸಂಸ್ಥೆಯಾಗಿದೆ. ಇಲ್ಲಿಂದಲೇ ಸಾಮೂಹಿಕತೆಯ ಆರಂಭವಾಗುತ್ತದೆ ಹಾಗೂ ಹಲವು ಕುಟುಂಬಗಳು ಸೇರಿ ಸಮಾಜದ ರಚನೆಯಾಗುತ್ತದೆ. ಕುಟುಂಬದ ಹಲವು ರೀತಿಗಳು ಈ ಹಿಂದೆಯೂ ಇದ್ದವು; ಇಂದೂ ಇವೆ ಎಂದು ಸಮಾಜ ಶಾಸ್ತ್ರಜ್ಞರು ಹೇಳುತ್ತಾರೆ. ಸಣ್ಣ ಮತ್ತು ಮಧ್ಯಮ ದರ್ಜೆಯ ಕುಟುಂಬಗಳು ಎಲ್ಲ ಕಾಲಗಳಲ್ಲೂ ಇದ್ದಂತೆ ದೊಡ್ಡ ಕುಟುಂಬಗಳೂ ಸಿಗುತ್ತವೆ. ಸಣ್ಣ ಕುಟುಂಬಗಳು ಪತಿ, ಪತ್ನಿ ಮತ್ತು ಮಕ್ಕಳನ್ನು ಹೊಂದಿರುತ್ತವೆ. ಕೆಲವೊಮ್ಮೆ ಅವುಗಳಲ್ಲಿ ತಂದೆ, ತಾಯಿ ಮತ್ತು ಹಲವು ಹತ್ತಿರದ ಸಂಬಂಧಿಗಳು ಸೇರಿರುತ್ತಾರೆ. ಕೆಲವು ಕುಟುಂಬಗಳು ಅವಿಭಜಿತವಾಗಿರುತ್ತವೆ. ಅವು ಹಲವಾರು ಕುಟುಂಬಗಳನ್ನೊಳಗೊಂಡಿರುತ್ತವೆ.

## ಇಸ್ಲಾಮ್ ಕುಟುಂಬ ವ್ಯವಸ್ಥೆಯನ್ನು ಭದ್ರಪಡಿಸಿದೆ-

ಇಸ್ಲಾಮ್ ಕುಟುಂಬದ ಮೂಲಭೂತ ಸಂಸ್ಥೆಯನ್ನು ಸಂರಕ್ಷಿಸಿತು ಮತ್ತು ಅದರಲ್ಲಿ ದೈವಿಕ ಮಾರ್ಗದರ್ಶನದ ಕೊರತೆ, ಇಂದ್ರಿಯಾಸಕ್ತಿಗಳ ಪ್ರಭಾವ ಅಥವಾ ಆಕ್ರಮ ಅತಿರೇಕಗಳಿಂದ ಬಂದಿದ್ದ ಹಲವಾರು ಕೆಡುಕುಗಳನ್ನು ನಿವಾರಿಸಿತು. ಪವಿತ್ರ ಕುರ್‌ಆನಿನಲ್ಲಿ ಈ ಕೆಡುಕುಗಳನ್ನು ಸವಿವರವಾಗಿ ಪ್ರಸ್ತಾಪಿಸಿ ಅವುಗಳನ್ನು ಹೇಗೆ ಅಳಿಸಬಹುದೆಂದೂ ತಿಳಿಸಲಾಗಿದೆ. ಅದು ಕುಟುಂಬ ವ್ಯವಸ್ಥೆಯಲ್ಲಿ ಕಂಡು ಬರುವ ಕೊರತೆಗಳನ್ನು ನಿವಾರಿಸಿದ್ದು ಮಾತ್ರವಲ್ಲದೆ ಕುಟುಂಬದ ಒಂದು ಸಮಗ್ರ ರೂಪರೇಷೆಯನ್ನು ತಯಾರಿಸಿ ಕುಟುಂಬ ಹೇಗೆ ಇರಬೇಕು. ಕುಟುಂಬದಲ್ಲಿ ಸಮಸ್ಯೆಗಳುಂಟಾದರೆ ಹೇಗೆ ಬಗೆಹರಿಸಬೇಕು ಎಂದೂ ತೋರಿಸಿಕೊಟ್ಟಿತು.ಇದರಿಂದ ಕುಟುಂಬದ ನೈಜ ಬೇಡಿಕೆಗಳು ಪೂರೈಸುವುದರೊಂದಿಗೆ ನ್ಯಾಯದ ಬೇಡಿಕೆಗಳೂ ಈಡೇರುತ್ತವೆ. ಕುರ್‌ಆನ್ ಒಂದು ಸ್ವಚ್ಛ ಮತ್ತು ಉತ್ತಮ

ಸಮಾಜಕ್ಕಾಗಿ ಒಂದು ಸ್ವಸ್ಥ ಕುಟುಂಬ ಅನಿವಾರ್ಯವೆಂದು ಸಾರುತ್ತದೆ. ಯಾವುದೇ ಕಾಲವಿರಲಿ, ಪರಿಸ್ಥಿತಿ ಏನೇ ಇರಲಿ, ಅದು ಕುಟುಂಬವನ್ನು ಒಂದು ಶಾಶ್ವತ ಸಂಸ್ಥೆಯ ರೂಪದಲ್ಲಿ ಸದಾ ಉಳಿಸಬಯಸುತ್ತದೆ. ಇದಕ್ಕಾಗಿ ಅದು ನೈತಿಕತೆ ಮತ್ತು ಕಾನೂನುಗಳೆರಡರ ಸಹಾಯ ಪಡೆಯಿತು.ಅದು ವಿವಿಧ ರೀತಿಯಿಂದ ಈ ಸಂಸ್ಥೆಯನ್ನು ಭದ್ರಪಡಿಸಿ ಶಕ್ತಿಶಾಲಿಯಾಗಿ ಮಾಡುತ್ತದೆ.

## ವೈರಾಗ್ಯ ಮತ್ತು ಸ್ವಚ್ಛಂದತೆಗಳ ಮಧ್ಯೆ ಸಂತುಲಿತ ಮಾರ್ಗ

ಕುಟುಂಬದ ಆರಂಭ ಸ್ತ್ರೀಪುರುಷರ ಲೈಂಗಿಕ ಸಂಬಂಧದಿಂದಾಗುತ್ತದೆ. ಒಂದು ವೈರಾಗ್ಯದ ದೃಷ್ಟಿಕೋನದ ಪ್ರಕಾರ, ಈ ಸಂಬಂಧ ಮನುಷ್ಯನ ಆಧ್ಯಾತ್ಮಿಕ ಅಭಿವೃದ್ಧಿಗೆ ತಡೆಯಾಗಿದೆ. ಆಧ್ಯಾತ್ಮಿಕ ಉನ್ನತಿ ಬಯಸುವವನು ಇದರಿಂದ ತನ್ನನ್ನು ದೂರವಿರಿಸಿಕೊಳ್ಳಬೇಕು. ಎರಡನೆಯ ದೃಷ್ಟಿಕೋನ ಲೈಂಗಿಕ ಸ್ವೇಚ್ಛೆ ಅಥವಾ ಅನಿಯಂತ್ರಿತ ಲೈಂಗಿಕಾಸಕ್ತಿಯ ಪೂರೈಕೆಯದ್ದು. ವೈರಾಗ್ಯವು ಮೆಲ್ಲ ಮೆಲ್ಲನೇ ತನ್ನ ಕೊನೆಯುಸಿರೆಳೆಯುತ್ತಿದೆ. ಅನಿಯಂತ್ರಿತ ಲೈಂಗಿಕತೆಯ ಮಾರ್ಗ ಈಗಲೂ ಮುಕ್ತವಾಗಿದೆ. ಇಸ್ಲಾಮ್ ಸಂತುಲಿತ ಮಾರ್ಗವನ್ನು ತೋರಿಸಿತು.ಅದರ ಪ್ರಕಾರ ಲೈಂಗಿಕ ಸಂತೃಪ್ತಿ ಒಂದು ನೈಸರ್ಗಿಕ ಅಗತ್ಯವಾಗಿದೆ. ಆದರೆ ಅದರ ಈಡೇರಿಕೆಯ ಅನುಮತಿ ಕೆಲವೊಂದು ವಿಶೇಷ ಶರ್ತಗಳೊಂದಿಗೆ ಮಾತ್ರ ಸಾಧ್ಯ. ಅದಕ್ಕಾಗಿ ಇಸ್ಲಾಮ್ ನಿಕಾಹ್(ಮದುವೆ)ನ ಶರ್ತವನ್ನಿಟ್ಟಿತು. ಅಂದರೆ ನಿಕಾಹ್‌ನ ಮೂಲಕ ಮಾತ್ರ ಮನುಷ್ಯ ತನ್ನ ಲೈಂಗಿಕ ಬಯಕೆಯನ್ನು ಈಡೇರಿಸಬಹುದು.ಇದು ಸಮ್ಮತಾರ್ಹ ಮಾತ್ರವಲ್ಲ ಪುಣ್ಯದಾಯಕವಾಗಿದೆ. ಒಮ್ಮೆ ಪ್ರವಾದಿ(ಸ) ಹೇಳಿದರು- ಪ್ರತಿಯೊಂದು ಒಳ್ಳೆಯ ಕಾರ್ಯಕ್ಕೆ ಪುಣ್ಯವಿದೆ, ನಿಮ್ಮ ಲೈಂಗಿಕ ಚಟುವಟಿಕೆಗಳಿಗೂ ಪುಣ್ಯವಿದೆ. ಆಗ ಸಂಗಾತಿಗಳು ಪ್ರಶ್ನಿಸಿದರು- ಓ ಪ್ರವಾದಿಗಳೇ! ಒಬ್ಬನು ತನ್ನ ಆಶೆಯನ್ನು ಪೂರ್ತಿಗೊಳಿಸುತ್ತಾನೆ, ಅದರಲ್ಲಿಯೂ ಅವನಿಗೆ ಪುಣ್ಯವಿದೆಯೇ?

أرايتم لو وضعها فى حرام أكان عليه فيها وزرٌ؟ فكذلك اذا وضعها فى الحلال كان له اجرٌ۔

ಪ್ರವಾದಿ(ಸ) ಹೇಳಿದರು- ನಿಮ್ಮ ಅಭಿಪ್ರಾಯವೇನು, ಒಂದು ವೇಳೆ ಅವನು ತನ್ನ ಆಶೆಯನ್ನು ನಿಷಿದ್ಧ ಮಾರ್ಗದಿಂದ ಪೂರೈಸಿದ್ದರೆ ಪಾಪವಾಗುತ್ತಿರಲಿಲ್ಲವೇ?, ಅದೇ ರೀತಿ ಅವನು ಧರ್ಮಸಮ್ಮತ ಮಾರ್ಗದಿಂದ ತನ್ನ ಆಶೆಯನ್ನು ಈಡೇರಿಸಿದರೆ ಪುಣ್ಯಕ್ಕೆ ಅರ್ಹನಾಗುತ್ತಾನೆ. (ಸಹೀಹ್ ಮುಸ್ಲಿಮ್, ಕಿತಾಬುಝ್ಝಕಾಹ್)

ಲೈಂಗಿಕ ಬಯಕೆಯನ್ನು ನಾಶಪಡಿಸುವ ಪ್ರಯತ್ನ ಮನುಷ್ಯ ಸ್ವಭಾವಕ್ಕೆ ವಿರುದ್ಧವಾದುದು. ಮನುಷ್ಯ ಎಂದೂ ಅದರಲ್ಲಿ ಯಶಸ್ವಿಯಾಗಲಾರನು. ಇಸ್ಲಾಮ್ ಇದನ್ನು ಕಠಿಣವಾಗಿ ನಿಷೇಧಿಸಿತು. ಪ್ರವಾದಿ ಸಂಗಾತಿಗಳಲ್ಲಿ ಕೆಲವರು ವೈರಾಗ್ಯ ಸ್ವೀಕರಿಸಬಯಸಿದರು. ಪ್ರವಾದಿ ಹೇಳಿದರು- ಇಸ್ಲಾಮಿನಲ್ಲಿ ಅದಕ್ಕೆ ಅವಕಾಶವಿಲ್ಲ, ಒಂದು ಪ್ರವಾದಿ ವಚನ ಹೀಗಿದೆ-

''ಇಸ್ಲಾಮಿನಲ್ಲಿ ವೈರಾಗ್ಯವಿಲ್ಲ.'' لا رهبانية في الاسلام

ಇದರ ವರದಿ ದುರ್ಬಲವಾಗಿದ್ದರೂ ಇದರಲ್ಲಿ ಹೇಳಿರುವ ವಿಷಯ ಇತರ ಅಧಿಕೃತ ಹದೀಸ್‌ಗಳಿಂದ ಸಾಬೀತಾಗಿದೆ. ಪ್ರವಾದಿ ಸಂಗಾತಿಗಳಲ್ಲಿ ಕೆಲವರು ಲೈಂಗಿಕ ಆಸಕ್ತಿಯ ನಿಗ್ರಹಕ್ಕೆ ಕಸಿ ಮಾಡಿಸುವ ಕುರಿತು ಯೋಚಿಸುತ್ತಿದ್ದರು, ಪ್ರವಾದಿಗೆ ತಿಳಿದಾಗ-

''ನನಗೆ ವೈರಾಗ್ಯದ ಆಜ್ಞೆ ನೀಡಲಾಗಿಲ್ಲ.'' انی لم اومر بالرهبانية

(ಸುನನ್ ಅಲ್ ದಾರಿಮಿ ಕಿತಾಬುನ್ನಿಕಾಹ್)

## ನಿಕಾಹ್‌ನ ಉದ್ದೇಶ

ಮನುಷ್ಯ ಲಜ್ಜೆ ಮತ್ತು ಗೌರವಾರ್ಹ ಜೀವನ ನಡೆಸುವಂತಾಗಬೇಕು ಹಾಗೂ ತಪ್ಪು ದಾರಿ ಹಿಡಿಯುವುದರಿಂದ ಸುರಕ್ಷಿತನಾಗಬೇಕೆಂಬುದು ನಿಕಾಹ್‌ನ ಉದ್ದೇಶ ಎಂದು ಇಸ್ಲಾಮ್ ಹೇಳುತ್ತದೆ. ಪ್ರವಾದಿ ಹೇಳಿದರು-

يا معشر الشباب من استطاع منكم الباءة فليتزوّج

''ಓ, ಯುವಕರೇ! ನಿಮ್ಮಲ್ಲಿ ಮದುವೆಯಾಗುವ ಸಾಮರ್ಥ್ಯವುಳ್ಳವನು ಮದುವೆ ಮಾಡಿಕೊಳ್ಳಬೇಕು.'' (ಸಹೀಹುಲ್ ಬುಖಾರಿ, ಸಹೀಹುಲ್ ಮುಸ್ಲಿಮ್)

ವಿದ್ವಾಂಸರ ಪ್ರಕಾರ ಒಬ್ಬನು ಅನೈತಿಕತೆಗೆ ಸಿಲುಕುವ ಭಯವಿದ್ದರೆ ಮತ್ತು ಅವನು ಶೀಘ್ರವೇ ಹಜ್ಜ್ ಕರ್ಮ ನಿರ್ವಹಿಸುವವನಿದ್ದರೆ ಅವನು ಮೊದಲು ನಿಕಾಹ್ ಮಾಡಿಕೊಳ್ಳಬೇಕು, ನಂತರ ಹಜ್ಜ್‌ಗೆ ಹೋಗಲಿ. ಏಕೆಂದರೆ ಹಜ್ಜ್ ಮುಂದೂಡಬಹುದು, ಆದರೆ ನಿಕಾಹ್ ಮುಂದೂಡಿದರೆ ಅನೈತಿಕತೆಗೆ ಸಿಲುಕುವ ಭಯವಿದೆ. ಇದೇ ಹದೀಸ್‌ನ ಮುಂದಿನ ಭಾಗದಲ್ಲಿ ಹೀಗೆ ಹೇಳಲಾಗಿದೆ-

ومن لم يستطع فعليه بالصوم، فانه له وجاء-

''ಯಾರಿಗೆ ಮದುವೆಯಾಗುವ ಸಾಮರ್ಥ್ಯವಿಲ್ಲವೋ ಅವನು ಉಪವಾಸ ಆಚರಿಸಲಿ, ಅದು ಅವನಿಗೆ ತಡೆಯಾಗುವುದು.''

ಅರ್ಥಾತ್ ಉಪವಾಸ ಆಚರಿಸುವುದರಿಂದ ಲೈಂಗಿಕ ಆಸಕ್ತಿಯು ನಿಯಂತ್ರಣದಲ್ಲಿರುತ್ತದೆ. ಮನುಷ್ಯ ಚೆನ್ನಾಗಿ ಉಂಡು ತಿಂದು ಮೋಜಿನ ಜೀವನ ನಡೆಸಿದರೆ ಅವನ ಲೈಂಗಿಕ ಭಾವನೆಗಳು ಅದೇ ಪ್ರಕಾರ ಉತ್ತೇಜನಗೊಳ್ಳುತ್ತಿರುತ್ತವೆ. ಇದನ್ನು ನಿಯಂತ್ರಿಸಲು ಉಪವಾಸ ಆಚರಿಸುವಂತೆ ಸೂಚಿಸಲಾಗಿದೆ. ಆಹಾರ ಪಾನೀಯಗಳ ಮೇಲೆ ನಿಯಂತ್ರಣವಿದ್ದರೆ ಲೈಂಗಿಕ ಭಾವನೆಗಳೂ ನಿಯಂತ್ರಣದಲ್ಲಿರುತ್ತವೆ. ಸುಖಲೋಲುಪತೆಯ ಜೀವನವನ್ನು ತ್ಯಜಿಸುವುದು ಅನೈತಿಕತೆಯಿಂದ ರಕ್ಷಣೆಹೊಂದುವ ಇನ್ನೊಂದುದು ಮಾರ್ಗವಾಗಿದೆ. ಪವಿತ್ರ ಕುರ್‌ಆನಿನಲ್ಲಿ ವಿವಾಹ ನಿಷಿದ್ಧ ಸಂಬಂಧಗಳನ್ನು ಉಲ್ಲೇಖಿಸಿದ ನಂತರ ಹೇಳಲಾಗಿದೆ.

وَ أُحِلَّ لَكُمْ مَّا وَرَآءَ ذٰلِكُمْ اَنْ تَبْتَغُوْا بِاَمْوَالِكُمْ مُّحْصِنِيْنَ غَيْرَ مُسٰفِحِيْنَ

ಇವರ ಹೊರತಾಗಿರುವ ಸ್ತ್ರೀಯರನ್ನು ನೀವು ನಿಮ್ಮ ಸಂಪತ್ತಿನ ಮೂಲಕ ಗಳಿಸುವುದನ್ನು

ಧರ್ಮಬದ್ಧಗೊಳಿಸಲಾಗಿದೆ. ಆದರೆ ಅವರನ್ನು ವಿವಾಹಬಂಧನದಲ್ಲಿಡಬೇಕು. ಸ್ವಚ್ಛಂದ ಲೈಂಗಿಕತೆ ಸಲ್ಲದು. (ಪವಿತ್ರ ಕುರ್‌ಆನ್, 4:24)

ಅರ್ಥಾತ್ ವಿವಾಹನಿಷಿದ್ಧ ಸಂಬಂಧಿಗಳನ್ನು ವಿವಾಹವಾಗುವಂತಿಲ್ಲ, ಅವರನ್ನು ಹೊರತು ಪಡಿಸಿ ಇತರ ಸ್ತ್ರೀಯರನ್ನು ಮಹರ್ ಕೊಟ್ಟು ನಿಕಾಹ್ ಮಾಡಿಕೊಳ್ಳಬಹುದು. ನೀವು ಮರ್ಯಾದೆಯೊಂದಿಗೆ ಜೀವಿಸಿ, ಅನೈತಿಕತೆಯಿಂದ ಪಾರಾಗಬಹುದೆಂಬುದು ಇದರ ಉದ್ದೇಶ. ಅರಬೀ ಭಾಷೆಯಲ್ಲಿ ''حصن'' ಎಂದರೆ ಕೋಟೆ. ''محصنين'' ಎಂದರೆ ಆ ಕೋಟೆಯಲ್ಲಿ ಪ್ರವೇಶಿಸಿರಿ.ಇದರೊಳಗೆ ಬಂದ ನಂತರ ನಿಮ್ಮ ಮೇಲೆ ಅನೈತಿಕತೆ ಆಕ್ರಮಣ ಮಾಡದು.ಈ ಕೋಟೆಯೊಳಗೆ ಬರುವವನು ರಕ್ಷಿಸಲ್ಪಡುವನು. ಇದೇ ರೀತಿಯ ಇನ್ನೊಂದು ಅರಬಿ ಪದ ''سفح'' ಎಂಬುದು ಓರ್ವ ವ್ಯಕ್ತಿ ತನ್ನ ಲೈಂಗಿಕ ಭಾವನೆಗಳ ಹಿಂದೆ ಅನಿಯಂತ್ರಿತವಾಗಿ ಓಡುವ ಚಾಳಿಗೆ ಉಪಯೋಗಿಸಲಾಗುತ್ತದೆ. ಮದುವೆಯ ಆದೇಶದೊಂದಿಗಿರುವ ಅದರ ಔಚಿತ್ಯ ನೀವು ಆ ಮೂಲಕ ನಿಮ್ಮ ಮಾನ ಮರ್ಯಾದೆಯ ರಕ್ಷಣೆಯಾಗಬಹುದು ಮತ್ತು ಅನೈತಿಕತೆಯ ದುಷ್ಪರಿಣಾಮದಿಂದ ರಕ್ಷಣೆ ಹೊಂದಬಹುದೆನ್ನಲಾಗಿದೆ.

## ದಂಪತಿಗಳು ಪರಸ್ಪರ ನೆಮ್ಮದಿಯ ಮೂಲ

ಪವಿತ್ರ ಕುರ್‌ಆನ್ ನಿಕಾಹ್ ಎಂಬುದು ಪ್ರೀತಿ ಪ್ರೇಮದ ಸಂಬಂಧವೆಂದು ಸಾರುತ್ತದೆ. ಪರಸ್ಪರ ಪ್ರೀತಿ ನೈಸರ್ಗಿಕವಾಗಿರುತ್ತದೆ. ಈ ಸಂಬಂಧದ ಕಾರಣ ಜೀವನದ ಅಶಾಂತಿ ಸಂಕಷ್ಟ, ಅಸಮಾಧಾನಗಳು ದೂರವಾಗಿ ನೆಮ್ಮದಿ ಸಿಗುತ್ತದೆ.ಓರ್ವ ಪುರುಷ ಓರ್ವ ಮಹಿಳೆಯನ್ನು ವಿವಾಹವಾಗುತ್ತಾನೆ. ಕೆಲವೊಮ್ಮೆ ಮೊದಲು ಅವಳ ಯಾವುದೇ ಪರಿಚಯವಿರುವುದಿಲ್ಲ, ಆದರೆ ಮದುವೆಯಾದ ಕೂಡಲೇ ಅವರ ಮಧ್ಯೆ ಪ್ರೀತಿಯುಂಟಾಗುತ್ತದೆ. ಪವಿತ್ರ ಕುರ್‌ಆನ್ ಇದು ನಿಸರ್ಗದ ಒಂದು ದೊಡ್ಡ ನಿದರ್ಶನ ಎಂದು ಹೇಳುತ್ತದೆ.

وَ مِنْ اٰيٰتِهٖۤ اَنْ خَلَقَ لَكُمْ مِّنْ اَنْفُسِكُمْ اَزْوَاجًا لِّتَسْكُنُوْۤا اِلَيْهَا وَ جَعَلَ بَيْنَكُمْ مَّوَدَّةً وَّ
رَحْمَةً ؕ اِنَّ فِيْ ذٰلِكَ لَاٰيٰتٍ لِّقَوْمٍ يَّتَفَكَّرُوْنَ ﴿۲۱﴾

ಅವನು ನಿಮಗಾಗಿ ನಿಮ್ಮ ವರ್ಗದಿಂದಲೇ ಜೋಡಿಗಳನ್ನು ಸೃಷ್ಟಿಸಿ, ನೀವು ಅವರ ಬಳಿ ಪ್ರಶಾಂತಿಯನ್ನು ಪಡೆಯುವಂತೆ ಮಾಡಿದುದು ಮತ್ತು ನಿಮ್ಮ ನಡುವೆ ಪ್ರೇಮ ಮತ್ತು ಅನುಕಂಪವನ್ನುಂಟು ಮಾಡಿದುದೂ ಅವನ ನಿದರ್ಶನಗಳಲ್ಲೊಂದಾಗಿದೆ. ನಿಶ್ಚಯವಾಗಿಯೂ ವಿವೇಚಿಸುವವರಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ. (ಪವಿತ್ರ ಕುರ್‌ಆನ್, 30:21)

ಈ ಸೂಕ್ತದಲ್ಲಿ ನಿಕಾಹ್‌ನ ಒಂದು ಉದ್ದೇಶ, ಆದರ ಮೂಲಕ ದಂಪತಿಗಳು ಪರಸ್ಪರ ನೆಮ್ಮದಿ ಗಳಿಸುವುದಾಗಿದೆ. ಎರಡನೆಯದಾಗಿ ಅಲ್ಲಾಹನು ಇದರ ಮೂಲಕ ದಂಪತಿಗಳ ಮಧ್ಯೆ ಪ್ರೀತಿ ಉಂಟು ಮಾಡುತ್ತಾನೆ ಎನ್ನಲಾಗಿದೆ. ಪ್ರೀತಿ ಉಭಯ ಪಕ್ಷದಿಂದಲೂ ಇರಬೇಕೆಂದು ಇದು ಸೂಚಿಸುತ್ತದೆ. ಅದು ಏಕಪಕ್ಷೀಯವಾಗಿದ್ದರೆ ದೀರ್ಘಕಾಲ ಮುಂದು

ವರಿಯಲಾರದು. ಇನ್ನು ನೆಮ್ಮದಿಯ ವಿಷಯ ಜೀವನದ ನಿಬಿಡತೆ, ಜಂಜಾಟದಲ್ಲಿ ಮನುಷ್ಯನಿಗೆ ಮನೆಯಲ್ಲಿ ಹಾಗೂ ಪತ್ನಿಯ ಮೂಲಕ ಮಾತ್ರ ನೆಮ್ಮದಿ ಸಿಗಬಲ್ಲುದು. ಇದೇ ರೀತಿ ಪತ್ನಿಗೂ ಪತಿಯೇ ನೆಮ್ಮದಿ, ಸಮಾಧಾನಗಳ ಮೂಲವಾಗಿದ್ದಾನೆ. ಇಂದು ಮನುಷ್ಯ ನೆಮ್ಮದಿಯನ್ನು ಹುಡುಕುತ್ತಿದ್ದಾನೆ. ಲೌಕಿಕ ಪ್ರಗತಿಯ ಹೊರತಾಗಿಯೂ ಅವನಿಂದ ವಂಚಿತ ವಾಗಿರುವುದು ನೆಮ್ಮದಿಯೇ ಆಗಿದೆ. ಕುರ್‌ಆನ್ ಹೇಳಿತು- ನಿಮಗೆ ನೆಮ್ಮದಿ ಬೇಕಿದ್ದರೆ ದಾಂಪತ್ಯ ಜೀವನ ನಡೆಸಿ. ಇಬ್ಬರು ಅಪರಿಚಿತ ಮನುಷ್ಯರು ಪರಸ್ಪರ ನೆಮ್ಮದಿಗೆ ಹೇಗೆ ಕಾರಣರಾಗುತ್ತಾರೆ ಎಂಬುದರಲ್ಲಿ ಚಿಂತಿಸುವ ಮತ್ತು ಆಲೋಚಿಸುವ ಜನರಿಗೆ ಕುರುಹುಗಳಿವೆ ಎಂದು ಹೇಳುತ್ತದೆ.

ದಂಪತಿಗಳ ಮಧ್ಯೆ ಸಂಬಂಧ ಹೇಗಿರಬೇಕೆಂದು ಕುರ್‌ಆನ್ ಈ ಪದಗಳಲ್ಲಿ ವಿವರಿಸುತ್ತದೆ.

هُنَّ لِبَاسٌ لَّكُمْ وَاَنْتُمْ لِبَاسٌ لَّهُنَّ

**ಅವರು ನಿಮಗೆ ಉಡುಪಾಗಿರುವವರು ಮತ್ತು ನೀವು ಅವರಿಗೆ ಉಡುಪಾಗಿರುವಿರಿ.**

**(ಪವಿತ್ರ ಕುರ್‌ಆನ್, 2:187)**

ಈ ಸೂಕ್ತದ ಅರ್ಥದ ಬಗ್ಗೆ ನಾವು ಯೋಚಿಸಿದಷ್ಟು ಹೊಸ ಹೊಸ ಮಗ್ಗುಲುಗಳು ನಮ್ಮ ಮುಂದೆ ಬರುತ್ತಿರುತ್ತವೆ ಹಾಗೂ ಕುರ್‌ಆನ್ ಎಷ್ಟೊಂದು ಅರ್ಥಪೂರ್ಣ, ಅತ್ಯುತ್ತಮ ವ್ಯಾಖ್ಯೆ ಉಪಯೋಗಿಸಿದೆಯೆಂದು ಆಶ್ಚರ್ಯಚಕಿತರಾಗುತ್ತೇವೆ. ಮನುಷ್ಯನ ಉಡುಪು ಅವನ ದೇಹಕ್ಕೆ ಅತೀ ಹೆಚ್ಚು ಹತ್ತಿರವಾಗಿರುತ್ತದೆ ಆದಕ್ಕಿಂತ ಹತ್ತಿರವಿರುವ ವಸ್ತು ಬೇರೊಂದಿಲ್ಲ. ಕುರ್‌ಆನ್ ಹೇಳಿತು- ''ನೀವು ಪತ್ನಿಯ ಉಡುಪು ಮತ್ತು ಅವಳು ನಿಮಗೆ ಉಡುಪಾಗಿದ್ದಾಳೆ.'' ಪತಿ ಪತ್ನಿಯರ ಮಧ್ಯೆ ಇರುವ ಸಾಮಿಪ್ಯ ವಿವರಿಸಲು ಇದಕ್ಕಿಂತ ಉತ್ತಮ ಉದಾಹರಣೆ ನೀಡಲು ಸಾಧ್ಯವಿಲ್ಲ. ಉಡುಪಿನ ಒಂದು ಪ್ರಯೋಜನ ಅದು ನಮ್ಮ ದೈಹಿಕ ನ್ಯೂನತೆಗಳನ್ನು ಮುಚ್ಚುತ್ತದೆ. ದೇಹದ ಯಾವ ಭಾಗದಲ್ಲಿ ಉಡುಪು ಇರುವುದೋ ಆ ಭಾಗದಲ್ಲಿರುವ ವ್ರಣ, ಗುಳ್ಳೆ ಗಾಯಗಳನ್ನು ಉಡುಪು ಮರೆಮಾಚುತ್ತದೆ. ನಿಮ್ಮ ಸಂಬಂಧದ ಸ್ವರೂಪವೂ ಉಡುಪಿನಂತೆ ನೀವು ಪರಸ್ಪರ ಒಬ್ಬರು ಇನ್ನೊಬ್ಬರಿಗೆ ಪರದೆಯಾಗಿದ್ದೀರಿ.

## ಇಸ್ಲಾಮ್ ಪುರುಷನನ್ನು ಕುಟುಂಬದ ಮುಖ್ಯಸ್ಥನನ್ನಾಗಿ ಮಾಡಿದೆ.

ಇಸ್ಲಾಮ್ ಕುಟುಂಬದ ನಿರ್ಮಾಣದಲ್ಲಿ ಸ್ತ್ರೀ ಪುರುಷರಿಬ್ಬರನ್ನೂ ಭಾಗೀದಾರರನ್ನಾಗಿ ಮಾಡಿತು. ಆದರೆ ಪುರುಷನನ್ನು ಮನೆ ಮತ್ತು ಕುಟುಂಬದ ಮುಖ್ಯಸ್ಥನನ್ನಾಗಿ ಮಾಡಿತು. ಅತ್ಯಂತ ಸಣ್ಣ ಸಂಸ್ಥೆಯೂ ಹೊಣೆಗಾರನಿಲ್ಲದೆ ಕಾರ್ಯ ನಿರ್ವಹಿಸದು. ಸಂಸ್ಥೆಗೆ ಸಂಬಂಧಪಟ್ಟವರೆಲ್ಲರೂ ತಮ್ಮ ತಮ್ಮ ಆದೇಶ ಚಲಾಯಿಸಲು ಇಚ್ಛಿಸಿದರೆ ಕಾರ್ಯತಃ ಅಸಾಧ್ಯ. ಆದ್ದರಿಂದಲೇ ಕುರ್‌ಆನ್ ಹೇಳಿತು- ಸ್ತ್ರೀ ಪುರುಷರಿಬ್ಬರೂ ಸೇರಿ ಕುಟುಂಬದ ನಿರ್ಮಾಣ ಮಾಡುವರು, ಆದರೆ ಅದರಲ್ಲಿ ಪುರುಷನು ಹೊಣೆಗಾರನಾಗಿರುವನು.

اَلرِّجَالُ قَوّٰمُوْنَ عَلَى النِّسَآءِ بِمَا فَضَّلَ اللّٰهُ بَعْضَهُمْ عَلٰى بَعْضٍ وَّ بِمَآ اَنْفَقُوْا مِنْ اَمْوَالِهِمْ

**ಪುರುಷರು ಸ್ತ್ರೀಯರ ಮೇಲೆ ಮೇಲ್ವಿಚಾರಕರಾಗಿರುತ್ತಾರೆ. ಇದು ಅಲ್ಲಾಹನು ಕೆಲವರಿಗೆ ಕೆಲವರ ಮೇಲೆ ಶ್ರೇಷ್ಠತೆ ಪ್ರದಾನ ಮಾಡಿದುದರಿಂದ ಮತ್ತು ಪುರುಷರು ತಮ್ಮ ಸಂಪತ್ತನ್ನು ಖರ್ಚು ಮಾಡುವುದರಿಂದ. (ಪವಿತ್ರ ಕುರ್‌ಆನ್, 4:34)**

ಕುಟುಂಬ ವ್ಯವಸ್ಥೆಯಲ್ಲಿ ಪುರುಷನನ್ನು ಹೊಣೆಗಾರನನ್ನಾಗಿ ಮಾಡುವ ಸೂಕ್ತದಲ್ಲಿ 2 ಕಾರಣಗಳನ್ನು ವಿವರಿಸಲಾಗಿದೆ. ಒಂದನೆಯದು ಅಲ್ಲಾಹನು ಪುರುಷನಿಗೆ ದೈಹಿಕ, ಬೌದ್ಧಿಕ ಮತ್ತಿತರ ವಿಷಯಗಳಲ್ಲಿ ಸ್ತ್ರೀಯರಿಗಿಂತ ಹೆಚ್ಚು ಸಾಮರ್ಥ್ಯಗಳನ್ನು ದಯಪಾಲಿಸಿದ್ದಾನೆ. 2ನೇ ಕಾರಣ ಪುರುಷನ ಮೇಲೆ ಸ್ತ್ರೀಯ ಆರ್ಥಿಕ ಹೊಣೆ ಇದೆ. ಇದಕ್ಕೂ ಅವನ ಶಕ್ತಿ ಮತ್ತು ಸಾಮರ್ಥ್ಯವೇ ಕಾರಣ. ಶಕ್ತಿಯುತ ಮತ್ತು ಪ್ರಬಲನಾಗಿರುವ ಓರ್ವನು ದುರ್ಬಲನಾಗಿರುವ ಇನ್ನೋರ್ವನ ಹೊರೆ ವಹಿಸಬೇಕಾದುದು ಅಗತ್ಯ. ಕುರ್‌ಆನ್ ಹೇಳುತ್ತದೆ– ಪುರುಷನು ಬಲಶಾಲಿಯಾಗಿರುವುದರಿಂದ ಅವನಿಗಿಂತ ದುರ್ಬಲೆಯಾದ ಮಹಿಳೆಗಾಗಿ ತನ್ನ ಹಣ ಖರ್ಚು ಮಾಡಲಿ ಮತ್ತು ಅವಳ ಅವಶ್ಯಕತೆಗಳನ್ನು ಪೂರೈಸಲಿ. ಇದೊಂದು ಸಾರ್ವತ್ರಿಕ ನಿಯಮ. ಇದಕ್ಕೆ ಹೊರತಾದ ಹಲವು ರೂಪಗಳಿರಬಹುದು. ಓರ್ವ ಸ್ತ್ರೀ ಪುರುಷನಿಗಿಂತ ಹೆಚ್ಚು ಶಕ್ತಿಶಾಲಿ, ಸಾಮರ್ಥ್ಯವುಳ್ಳವಳು ಮತ್ತು ಶ್ರೀಮಂತಳೂ ಇರುವ ಸಾಧ್ಯತೆಗಳಿವೆ. ಆದರೆ ಸಾರ್ವತ್ರಿಕವಾಗಿ ಪುರುಷನು ಕುಟುಂಬದ ಯಜಮಾನನೆಂದು ಹೇಳಲಾಯಿತು. ಇದರಲ್ಲಿ ಮೂಲತಃ ಶಕ್ತಿ, ಸಾಮರ್ಥ್ಯ ಮತ್ತು ಹೊಣೆಗಾರಿಕೆಗಳನ್ನು ಪರಿಗಣಿಸಲಾಗಿದೆ.ಪುರುಷನಿಗೆ ಈ ವಿಷಯಗಳಲ್ಲಿ ಆದ್ಯತೆಗಳಿರುವುದರಿಂದ ಮನೆಯ ವ್ಯವಸ್ಥೆಯಲ್ಲಿ ಅವನಿಗೆ ಯಜಮಾನನ ಸ್ಥಾನಮಾನವಿದೆ ಎಂದು ಹೇಳಲಾಯಿತು. ಸ್ತ್ರೀಯು ಪುರುಷನ ಈ ಸ್ಥಾನಮಾನವನ್ನು ಸ್ವೀಕರಿಸಿ ಸಂತೋಷದಿಂದ ಅನುಸರಿಸಿದಾಗ ಮಾತ್ರ ಕುಟುಂಬ ವ್ಯವಸ್ಥೆ ಉತ್ತಮ ರೀತಿಯಲ್ಲಿ ನಡೆಯಲು ಸಾಧ್ಯ. ಆದ್ದರಿಂದಲೇ ಕುರ್‌ಆನ್ ಹೇಳುತ್ತದೆ–

فَالصّٰلِحٰتُ قٰنِتٰتٌ حٰفِظٰتٌ لِّلْغَيْبِ بِمَا حَفِظَ اللّٰهُ

**ಸುಶೀಲೆಯರಾದ ಸ್ತ್ರೀಯರು ಅನುಸರಣಾ ಶೀಲರಾಗಿರುತ್ತಾರೆ ಮತ್ತು ಅವರು ಪುರುಷರ ಅನುಪಸ್ಥಿತಿಯಲ್ಲಿ ಅಲ್ಲಾಹನ ರಕ್ಷಣೆಯಲ್ಲಿ ಅವರ ಹಕ್ಕು ಬಾಧ್ಯತೆಗಳ ರಕ್ಷಣೆಮಾಡುತ್ತಾರೆ. (ಪವಿತ್ರ ಕುರ್‌ಆನ್, 4:34)**

''**قنوت**''ನ ಅರ್ಥ ಅನುಸರಣೆ ಮತ್ತು ಆಜ್ಞಾಪಾಲನೆಯಾಗಿದೆ. ''**قانتات**''ನ ಅರ್ಥ ಸುಶೀಲೆಯರಾದ ಮಹಿಳೆಯರು ಅನುಸರಣಶೀಲರಾಗಿರುತ್ತಾರೆ. ಅಲ್ಲಾಹನ ಆಜ್ಞೆ ಮತ್ತು ಪತಿಯ ಆದೇಶಗಳನ್ನು ಪಾಲಿಸುವವಳು. ''**بما حفظ الله**'' ಇದರ ಒಂದು ಅರ್ಥವೇನೆಂದರೆ ಅಲ್ಲಾಹನು ಮಹಿಳೆಯರ ಹಕ್ಕುಗಳನ್ನು ರಕ್ಷಿಸುತ್ತಾ ಪುರುಷರಿಗೆ ನಿರಂಕುಶ ಅಧಿಕಾರ ನೀಡಿಲ್ಲವಾದುದರಿಂದ ಪತ್ನಿಯು ಪತಿಗೆ ಅನುಸರಣಶೀಲಳಾಗಿರುವುದು ಅದರ ಬೇಡಿಕೆಯಾಗಿದೆ. ಪತಿಯ ಅನುಸರಣೆಯಿಂದ ತಮ್ಮ ಹಕ್ಕುಗಳು ವ್ಯರ್ಥವಾಗಬಹುದೆಂದು ಭಯಪಡುವ ಅಗತ್ಯವಿಲ್ಲ.

# ಮಹಿಳೆಯನ್ನು ಅಕ್ರಮ ಮತ್ತು ಅನ್ಯಾಯದಿಂದ ರಕ್ಷಿಸುವ ಮಾರ್ಗೋಪಾಯಗಳು

ಅಧಿಕಾರದ ಜೊತೆಗೆ ಅಕ್ರಮ, ಅತಿರೇಕ ಮತ್ತು ಅನ್ಯಾಯಕ್ಕೂ ಸದಾ ಅವಕಾಶವಿರುತ್ತದೆ. ಪುರುಷರಿಗೆ ಅಧಿಕಾರ ಕೊಟ್ಟಿದ್ದರೆ ಅವರಿಂದ ಅಕ್ರಮ, ಅತಿರೇಕವನ್ನು ತಡೆಯಲು ಎರಡು ಕ್ರಮ ಕೈಗೊಂಡಿತು. ಪ್ರಥಮವಾಗಿ ಮಹಿಳೆಯರೊಂದಿಗೆ ಸದ್ವರ್ತನೆ ತೋರಲು ಉಪದೇಶಿಸಲಾಯಿತು. ಈ ಬಗ್ಗೆ ಕುರ್‌ಆನ್ ಹೇಳುತ್ತದೆ-

وَعَاشِرُوْهُنَّ بِالْمَعْرُوْفِ ۚ فَاِنْ كَرِهْتُمُوْهُنَّ فَعَسٰۤى اَنْ تَكْرَهُوْا شَيْـًٔا وَّ يَجْعَلَ اللّٰهُ فِيْهِ خَيْرًا كَثِيْرًا ﴿١٩﴾

**ನೀವು ಅವರೊಂದಿಗೆ ಉತ್ತಮ ರೀತಿಯಿಂದ ಜೀವನ ನಡೆಸಿರಿ. ಅವರು ನಿಮಗೆ ಅಪ್ರಿಯರಾಗಿದ್ದರೆ ಒಂದು ವಸ್ತುವು ನಿಮಗೆ ಅಪ್ರಿಯವಾಗಿದ್ದರೂ ಅಲ್ಲಾಹ್ ಅದರಲ್ಲೇ ಅತೀ ಹೆಚ್ಚು ಒಳಿತನ್ನಿರಿಸಿರಲೂ ಬಹುದು. (ಪವಿತ್ರ ಕುರ್‌ಆನ್, 4:19)**

ಉತ್ತಮ ವರ್ತನೆ ಎಂದರೆ ಸಮಾಜದಲ್ಲಿರುವ ಉತ್ತಮ ವರ್ತನೆಯ ಕಲ್ಪನೆ ಮತ್ತು ಮಾನದಂಡದಂತೆ ಮಹಿಳೆಯರೊಂದಿಗೆ ವ್ಯವಹರಿಸಬೇಕು. ಈ ಮಾನದಂಡವು ಕಾಲ ಮತ್ತು ಪರಿಸ್ಥಿತಿಗನುಗುಣವಾಗಿ ಹಾಗೂ ಪತಿ ಪತ್ನಿಯರ ಪರಿಸ್ಥಿತಿಯ ದೃಷ್ಟಿಯಿಂದಲೂ ಬದಲಾಗುತ್ತಲೂ ಇರಬಹುದು. ಎಲ್ಲ ಪರಿಸ್ಥಿತಿಗಳಲ್ಲಿಯೂ ಪತ್ನಿಯರೊಂದಿಗೆ ಸದ್ವರ್ತನೆಯೆಂದು ಎಲ್ಲರೂ ಒಪ್ಪುವ ರೀತಿಯಲ್ಲಿ ವ್ಯವಹರಿಸಬೇಕು. ಇದರೊಂದಿಗೆ ಪತ್ನಿಯ ಕೆಲವು ವಿಷಯಗಳು ಪತಿಯ ಸ್ವಭಾವಕ್ಕೆ ಅಸಹನೀಯವಾಗಿರಬಹುದು, ಅವಳ ವರ್ತನೆ ತಪ್ಪಾಗಿರಬಹುದು, ಅವಳು ಸ್ವಭಾವದಲ್ಲಿ ಕಿರಿಕಿರಿ ಮಾಡುವವಳು, ಕೋಪಿಷ್ಠಳು, ಕೆಟ್ಟದಾಗಿ ಮಾತನಾಡುವವಳು, ಕೆಲವೊಮ್ಮೆ ಪತಿಯ ಆಜ್ಞೆಗಳನ್ನು ಪಾಲಿಸದೇ ಇರಬಹುದು ಎಂಬ ವಿಷಯವೂ ತಿಳಿಸಲಾಗಿದೆ. ಅವಳ ಈ ಎಲ್ಲಾ ದೌರ್ಬಲ್ಯಗಳ ಹೊರತಾಗಿಯೂ ನೀವು ಸದ್ವರ್ತನೆಯೊಂದಿಗೆ ವ್ಯವಹರಿಸಬೇಕೆಂಬುದೇ ಕುರ್‌ಆನಿನ ಇಂಗಿತವಾಗಿದೆ.

ಅಲ್ಲಾಹನು ಇದರಲ್ಲಿ ನಿಮಗೆ ಹಲವು ಒಳಿತುಗಳನ್ನಿಟ್ಟಿರಬಹುದು ಎಂಬ ಸೂಕ್ತದ ಈ ಅಂಶದಲ್ಲಿ ಅಲ್ಲಾಹನು ನಿಮ್ಮನ್ನು ಸಂತುಷ್ಟಪಡಿಸುವ ಶಿಕ್ಷಣ, ದೇವಭಯ,ಒಳಿತುಗಳ ದೃಷ್ಟಿಯಿಂದ ಉತ್ತಮವಾಗಿರುವ ಸಂತಾನವನ್ನು ನಿಮಗೆ ದಯಪಾಲಿಸಬಹುದು ಅದರ ಮೂಲಕ ಆ ತಾಯಿಯ ದುರ್ವರ್ತನೆಯನ್ನು ನೀವು ಮರೆತುಬಿಡುವಂತೆ ಮಾಡಬಹುದು ಎಂಬ ಸೂಚನೆಯಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಪತ್ನಿಯೊಂದಿಗೆ ಸದ್ವರ್ತನೆಯ ಉಪದೇಶ ಮಾಡಿದ್ದು ಮಾತ್ರವಲ್ಲ, ಅವಳ ಕಾನೂನುಬದ್ಧ ಹಕ್ಕುಗಳನ್ನೂ ನಿರ್ಧರಿಸಲಾಯಿತು. ಕುರ್‌ಆನ್ ಹೇಳಿತು-

وَلَهُنَّ مِثْلُ الَّذِىْ عَلَيْهِنَّ بِالْمَعْرُوْفِ ۖ

ಸ್ತ್ರೀಯರಿಗೆ ಪುರುಷರ ಮೇಲೆ ನ್ಯಾಯೋಚಿತ ಹಕ್ಕು ಇದೆ.

(ಪವಿತ್ರ ಕುರ್‌ಆನ್, 2:228)

ಅರ್ಥಾತ್- ಪತ್ನಿಯರಿಗೆ ಹೊಣೆಗಾರಿಕೆಗಳಿವೆ ಮತ್ತು ಅವರಿಗೆ ಹಕ್ಕುಗಳೂ ಇವೆ. ಪತ್ನಿಯರು ತಮ್ಮ ಹೊಣೆಗಾರಿಕೆಗಳನ್ನು ಸರಿಯಾಗಿ ನಿರ್ವಹಿಸುತ್ತಿದ್ದಾರೋ ಎಂದು ವಿಚಾರಿಸುವ ಹಕ್ಕು ಪತಿಯಂದಿರಿಗಿದೆ. ಕುರ್‌ಆನ್ ಪತ್ನಿಯರ ಹಕ್ಕು ಮತ್ತು ಹೊಣೆಗಾರಿಕೆಗಳೆರಡನ್ನೂ ಪ್ರಸ್ತಾಪಿಸಿದೆ. ದಾಂಪತ್ಯ ಜೀವನದಲ್ಲಿ ಪತ್ನಿ ತನ್ನ ಹೊಣೆಗಾರಿಕೆಗಳನ್ನು ನಿರ್ವಹಿಸುತ್ತಿದ್ದಾಳೋ ಎಂದು ವಿಚಾರಿಸುವುದರೊಂದಿಗೆ ಅವಳ ಹಕ್ಕುಗಳು ಪೂರೈಸಲ್ಪಡುತ್ತವೆಯೋ ಎಂದು ನೋಡುವುದು, ಅವುಗಳಲ್ಲಿ ಚ್ಯುತಿವುಂಟಾಗದಂತೆ ನೋಡುವ ವ್ಯವಸ್ಥೆಯೂ ಇರುವುದು.

## ಬಹುಪತ್ನಿತ್ವದ ಅನುಮತಿ

ಇಸ್ಲಾಮ್ ಪುರುಷನಿಗೆ ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದುವ ಅನುಮತಿ ನೀಡಿದೆ. ಅರಬರಲ್ಲಿ ಇದು ರೂಢಿಯಲ್ಲಿತ್ತು. ಜನರು ಅನೇಕ ಪತ್ನಿಯರನ್ನು ಇಟ್ಟುಕೊಳ್ಳುತ್ತಿದ್ದರು. ಅರಬೇತರ ರಾಷ್ಟ್ರಗಳಲ್ಲಿಯೂ ಶ್ರೀಮಂತರಿಗೆ ಹಲವಾರು ಪತ್ನಿಯರಿದ್ದರು. ಅದಕ್ಕೆ ಯಾವುದೇ ಮಿತಿಯಿರಲಿಲ್ಲ. ಇಸ್ಲಾಮ್ ಹೇಳಿತು- ಹೆಚ್ಚೆಂದರೆ ಒಬ್ಬ ಪುರುಷ ಒಮ್ಮೆಗೆ ನಾಲ್ಕು ಪತ್ನಿಯರನ್ನು ಹೊಂದಬಹುದು. ಈ ಮಾತು ಯುದ್ಧದ ಹಿನ್ನೆಲೆಯಲ್ಲಿ ಹೇಳಲಾಗಿದೆ. ಯುದ್ಧದ ಪರಿಸ್ಥಿತಿಯಲ್ಲಿ ಸಾಮಾನ್ಯವಾಗಿ ಯುವಕರು ಬಲಿಯಾಗಿ ಅವರ ಕೊರತೆಯುಂಟಾಗುವುದು ಎಲ್ಲರಿಗೂ ತಿಳಿದ ವಿಷಯ ಆ ಕಾಲದ ಯುದ್ಧಗಳಲ್ಲಿ ಈ ಸಾಧ್ಯತೆಗಳು ಹೆಚ್ಚಿದ್ದವು. ಆದ್ದರಿಂದ ಒಂದಕ್ಕಿಂತ ಹೆಚ್ಚು ಮದುವೆಯಾಗುವುದನ್ನು ನಿಷೇಧಿಸಿದ್ದರೆ ವಿಧವೆಯರಿಗೆ ಗಂಡಂದಿರು ಸಿಗುತ್ತಿರಲಿಲ್ಲ. ಇಸ್ಲಾಮ್ ಈ ಸಮಸ್ಯೆಗೆ ಪರಿಹಾರವಾಗಿ ಬಹುಪತ್ನಿತ್ವವನ್ನು ಸೂಚಿಸಿತು. ಆದರೆ ಇದನ್ನು ಕೇವಲ ಯುದ್ಧದ ಪರಿಸ್ಥಿತಿಗೆ ಸೀಮಿತಗೊಳಿಸದೆ ಎಲ್ಲ ಕಾಲಕ್ಕೂ ಮುಕ್ತವಾಗಿರಿಸಿತು. ಏಕೆಂದರೆ ಪುರುಷನಿಗೂ ಒಂದಕ್ಕಿಂತ ಹೆಚ್ಚು ಪತ್ನಿಯರ ಅಗತ್ಯ ಬೀಳಬಹುದು. ಆದ್ದರಿಂದ ಈ ಆದೇಶವು ಕೇವಲ ಯುದ್ಧ ಪರಿಸ್ಥಿತಿಗೆ ಸೀಮಿತವಲ್ಲ, ಸಾಮಾನ್ಯ ಪರಿಸ್ಥಿತಿಯಲ್ಲೂ ಪುರುಷನು ಅಗತ್ಯ ಕಂಡರೆ ಒಂದಕ್ಕಿಂತ ಹೆಚ್ಚು ಮದುವೆ ಮಾಡಿಕೊಳ್ಳಬಹುದು ಎಂಬುದರಲ್ಲಿ ಸಮುದಾಯಕ್ಕೆ ಒಮ್ಮತ ಅಭಿಪ್ರಾಯವಿದೆ. ಆದರೆ ಕುರ್‌ಆನ್ ಇದಕ್ಕೆ ಎರಡು ಶರ್ತಗಳನ್ನಿಡುತ್ತದೆ. ಒಂದನೆಯದು, ಒಬ್ಬ ಪುರುಷ ಏಕ ಕಾಲದಲ್ಲಿ ನಾಲ್ಕಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದುವಂತಿಲ್ಲ, ಎರಡನೆಯದು, ಒಂದಕ್ಕಿಂತ ಹೆಚ್ಚು ಪತ್ನಿಯರಿದ್ದರೆ ಅವರ ಮಧ್ಯೆ ನ್ಯಾಯ ಪಾಲಿಸುವುದು ಕಡ್ಡಾಯವಾಗಿದೆ.

وَ اِنْ خِفْتُمْ اَلَّا تُقْسِطُوْا فِي الْيَتٰمٰى فَانْكِحُوْا مَا طَابَ لَكُمْ مِّنَ النِّسَآءِ مَثْنٰى وَ
ثُلٰثَ وَ رُبٰعَ ۚ فَاِنْ خِفْتُمْ اَلَّا تَعْدِلُوْا فَوَاحِدَةً اَوْ مَا مَلَكَتْ اَيْمَانُكُمْ ؕ ذٰلِكَ
اَدْنٰۤى اَلَّا تَعُوْلُوْا ۝

ಅನಾಥರೊಂದಿಗೆ ನ್ಯಾಯವಾಗಿ ನಡೆದುಕೊಳ್ಳಲು ಸಾಧ್ಯವಾಗದೆಂಬ ಆಶಂಕೆ

**ನಿಮಗುಂಟಾದರೆ ಸ್ತ್ರೀಯರಲ್ಲಿ ನಿಮಗೆ ಮೆಚ್ಚಿದ ಇಬ್ಬರನ್ನೋ ಮೂವರನ್ನೋ ನಾಲ್ವರನ್ನೋ ವಿವಾಹ ಮಾಡಿಕೊಳ್ಳಿರಿ! ಆದರೆ ಅವರೊಂದಿಗೆ ನ್ಯಾಯ ಪಾಲಿಸಲಾರಿರೆಂಬ ಆಶಂಕೆ ನಿಮಗಿದ್ದರೆ ಒಬ್ಬ ಸ್ತ್ರೀಯನ್ನು ಮಾತ್ರ ಅಥವಾ ನಿಮ್ಮ ವಶಕ್ಕೆ ಬಂದ ಸ್ತ್ರೀಯರನ್ನು ಸ್ವೀಕರಿಸಿಕೊಳ್ಳಿರಿ. ಅನ್ಯಾಯದಿಂದ ತಪ್ಪಿಸಿಕೊಳ್ಳಲು ಇದು ಹೆಚ್ಚು ಉತ್ತಮ. (ಪವಿತ್ರ ಕುರ್‌ಆನ್, 4:3)**

ನಿಮಗೆ ಪತ್ನಿಯರೊಂದಿಗೆ ನ್ಯಾಯ ಪಾಲಿಸಲು ಸಾಧ್ಯವಾಗಲಿಕ್ಕಿಲ್ಲವೆಂಬ ಆಶಂಕೆಯಿದ್ದರೆ ಒಂದೇ ಪತ್ನಿಯನ್ನು ಹೊಂದಿರಿ ಎಂಬ ಪವಿತ್ರ ಕುರ್‌ಆನಿನ ಈ ಆದೇಶ ತುಂಬಾ ಮಹತ್ವದ್ದು. ಇದರಂತೆ ಓರ್ವ ಪುರುಷ ಮದುವೆಯ ಮೊದಲು ತನ್ನ ಪರಿಸ್ಥಿತಿ ಮತ್ತು ಸಂಪನ್ಮೂಲಗಳ ಅವಲೋಕನ ನಡೆಸಬೇಕು. ಇದರಲ್ಲಿ ಶಾರೀರಿಕ ಶಕ್ತಿ ಮತ್ತು ಆರ್ಥಿಕ ಸಂಪನ್ಮೂಲಗಳೆರಡೂ ಸೇರಿವೆ. ತನ್ನ ವಯಸ್ಸು, ಹುಟ್ಟಬಹುದಾದ ಸಂತಾನ, ಅದರ ಪೋಷಣೆ, ಶಿಕ್ಷಣ, ತರಬೇತಿಯ ಬಗ್ಗೆ ಚೆನ್ನಾಗಿ ಆಲೋಚಿಸಬೇಕು. ನ್ಯಾಯ ಪಾಲಿಸುವ ಬಗ್ಗೆ ಆಶಂಕೆಯಿದ್ದರೆ ಒಂದಕ್ಕಿಂತ ಹೆಚ್ಚು ಮದುವೆಯಾಗಬಾರದು. ಈ ನಿರ್ಬಂಧದಿಂದ ಅಕ್ರಮ ಅತಿರೇಕಗಳಿಂದ ಪಾರಾಗಬಹುದು. ಒಂದಕ್ಕಿಂತ ಹೆಚ್ಚು ಪತ್ನಿಯರಿರುವ ಸ್ಥಿತಿಯಲ್ಲಿ ನ್ಯಾಯ ಪಾಲನೆಯ ಬೇಡಿಕೆ ಈಡೇರುತ್ತಿಲ್ಲ, ಅವರಲ್ಲಿ ಯಾರದಾದರೂ ಹಕ್ಕು ಕಸಿಯಲ್ಪಡುತ್ತಿದೆ ಎಂದಾದರೆ ಕಾನೂನು ಕ್ರಮ ಕೈಗೊಳ್ಳಬಹುದು.

## ದಾಂಪತ್ಯ ಸಂಬಂಧ ಕೆಡಲಾರಂಭಿಸಿದರೆ

ದಾಂಪತ್ಯ ಸಂಬಂಧ ಸದಾ ಸೌಹಾರ್ದಮಯವಾಗಿಯೇ ಇರುವುದಿಲ್ಲ, ಕೆಲವೊಮ್ಮೆ ಅದು ಸಾಮರಸ್ಯವಿಲ್ಲದೆ, ಅಸಹನೀಯವೂ ಆಗಬಹುದು. ಇಂತಹ ಪರಿಸ್ಥಿತಿಯಲ್ಲಿ ಇಸ್ಲಾಮಿನ ಶಿಕ್ಷಣವೇನೆಂದರೆ ಪುರುಷ ಸಹನೆ ಮತ್ತು ಸಂಯಮ ಪಾಲಿಸಬೇಕು.ಯುಕ್ತಿ ಮತ್ತು ತಿಳಿ ಹೇಳುವ, ಉಪದೇಶ ಇತ್ಯಾದಿ ಮಾರ್ಗಗಳಿಂದ ಸುಧಾರಣೆಯ ಪ್ರಯತ್ನ ಮಾಡಬೇಕು. ಈ ಉದ್ದೇಶಕ್ಕಾಗಿ ಕೆಲವೊಮ್ಮೆ ಪತ್ನಿಯೊಂದಿಗೆ ಕಠಿಣ ಧೋರಣೆಯನ್ನೂ ತಾಳಬಹುದು. ಆದರೆ ಈ ಅಧಿಕಾರದ ದುರುಪಯೋಗ ಮತ್ತು ಅತಿರೇಕಕ್ಕೆ ಅನುಮತಿಯಿಲ್ಲ. ಇದೇ ರೀತಿ ಪತಿಯಲ್ಲಿ ಏನಾದರೂ ಕುಂದುಕೊರತೆಯಿದ್ದರೆ ಪತ್ನಿಯೂ ಅವನ ಸುಧಾರಣೆಗಾಗಿ ಸೂಕ್ತ ರೀತಿಯಲ್ಲಿ ಪ್ರಯತ್ನಿಸಬೇಕು.ಪ್ರಯತ್ನದ ಹೊರತಾಗಿಯೂ ಪತಿ ಪತ್ನಿಯರ ಸಂಬಂಧ ತಾವೇ ಸರಿಪಡಿಸಲಾಗದಷ್ಟು ಕೆಟ್ಟು ಹೋಗುವ ಸಂಭವವಿದೆಯೆಂದಾದರೆ ಇಂತಹ ಪರಿಸ್ಥಿತಿಯಲ್ಲಿ ಕುರ್‌ಆನಿನ ಶಿಕ್ಷಣವೇನೆಂದರೆ ಪ್ರತಿಯೊಂದು ಪಕ್ಷದಿಂದ ಒಬ್ಬ ಮಧ್ಯಸ್ಥನನ್ನು ನೇಮಿಸಬೇಕು. ಅವರು ಮನವೊಲಿಸುವ, ಉಪದೇಶಿಸುವ ಮೂಲಕ ಪರಿಸ್ಥಿತಿಯ ಸುಧಾರಣೆಗಾಗಿ ಪ್ರಯತ್ನಿಸಬೇಕು.ಯೌವನದಲ್ಲಿ ಆವೇಶ ಪ್ರಾಬಲ್ಯ ಸಾಧಿಸುತ್ತದೆ. ಹಲವಾರು ಅಪ್ರಿಯ ವಿಷಯಗಳು ಘಟಿಸುತ್ತವೆ. ಕೆಲವು ಸಲ ಎರಡೂ ಕುಟುಂಬದ ಜನರು ತಮ್ಮ ಅವಿವೇಕತನದಿಂದ ಪರಿಸ್ಥಿತಿಯನ್ನು ಕೆಡಿಸುತ್ತಾರೆ. ಪ್ರಾಮಾಣಿಕ ಪ್ರಯತ್ನದಿಂದ ಸುಧಾರಣೆಯನ್ನು ನಿರೀಕ್ಷಿಸಬಹುದು.

وَاِنْ خِفْتُمْ شِقَاقَ بَيْنِهِمَا فَابْعَثُوْا حَكَمًا مِّنْ اَهْلِهٖ وَ حَكَمًا مِّنْ اَهْلِهَا ۚ اِنْ

يُّرِيْدَآ اِصْلَاحًا يُّوَفِّقِ اللّٰهُ بَيْنَهُمَا ؕ اِنَّ اللّٰهَ كَانَ عَلِيْمًا خَبِيْرًا ۝

ಪತಿ- ಪತ್ನಿಯರ ಸಂಬಂಧ ಕೆಡುವುದೆಂಬುದು ನಿಮಗೆ ಆತಂಕವಾದಾಗ ಒಬ್ಬ ಮಧ್ಯಸ್ಥನನ್ನು ಪುರುಷನ ಕಡೆಯವರಿಂದಲೂ ಒಬ್ಬನನ್ನು ಸ್ತ್ರೀಯ ಕಡೆಯವರಿಂದಲೂ ನಿಯುಕ್ತಗೊಳಿಸಿರಿ. ಅವರಿಬ್ಬರೂ ಸುಧಾರಿಸಲು ಬಯಸಿದರೆ, ಅಲ್ಲಾಹ್ ಅವರ ನಡುವೆ ಸಾಮರಸ್ಯದ ಹಾದಿಯನ್ನು ತೆರೆಯುವನು. ನಿಶ್ಚಯವಾಗಿಯೂ ಅಲ್ಲಾಹ್ ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ. (ಪವಿತ್ರ ಕುರ್‌ಆನ್, 4:35)

ಈ ಸೂಕ್ತದಲ್ಲಿ 'ಅವರಿಚ್ಛಿಸಿದರೆ' ಎಂಬುದು ದಂಪತಿಗಳಿಗೆ ಅನ್ವಯವಾಗುವುದು. ಅಂದರೆ ದಂಪತಿಗಳು ಸುಧಾರಣೆಯ ಆಕಾಂಕ್ಷಿಗಳಾಗಿದ್ದರೆ ಅಲ್ಲಾಹನು ಅವರ ಮಧ್ಯೆ ಸಾಮರಸ್ಯ ಉಂಟು ಮಾಡುವನು. ಇನ್ನೊಂದು ಅಭಿಪ್ರಾಯದಂತೆ ಅದು ಇಬ್ಬರು ಮಧ್ಯಸ್ಥರನ್ನು ಅಭಿಸಂಬೋಧಿಸಿದ್ದು ಅವರಿಚ್ಛಿಸಿದರೆ ಅಲ್ಲಾಹನು ಯಾವುದೇ ಒಂದು ಮಾರ್ಗ ತೋರಿಸಬಹುದು. ಅಲ್ಲಾಹನ ಈ ಆದೇಶದ ಅಭಿಸಂಬೋಧಿತರು ಹೊರನೋಟಕ್ಕೆ ಎರಡು ಕುಟುಂಬದವರೆಂದೂ, ಅವರ ಹೊಣೆಗಾರರು ಸುಧಾರಣೆಯ ಪ್ರಯತ್ನ ಮಾಡಬೇಕೆಂದೂ ತೋರುತ್ತದೆ. ಇದರ ಅಭಿಸಂಬೋಧಿತರು ಮುಸ್ಲಿಮ್ ಸಮಾಜವೂ ಆಗಬಹುದು. ಒಂದು ವೇಳೆ ಈ ಸಮಸ್ಯೆ ನ್ಯಾಯಾಲಯಕ್ಕೆ ತಲುಪಿದ್ದರೆ ಅದೂ ಮಧ್ಯಸ್ಥರನ್ನು ನೇಮಿಸಬಹುದು. ಆದರೆ ಮಧ್ಯಸ್ಥರ ಪ್ರಯತ್ನ ಪರಿಸ್ಥಿತಿಯ ಸುಧಾರಣೆಯಾಗಿದೆ. ಅವರು ಎರಡೂ ಪಕ್ಷದವರಿಗೆ ಸಲಹೆ ನೀಡಬಹುದು, ತೀರ್ಮಾನ ಮಾಡುವಂತಿಲ್ಲ, ತೀರ್ಮಾನದ ಹಕ್ಕು ದಂಪತಿಗಳಿಗೆ ಮಾತ್ರ ಇರುವುದು. ಏನಿದ್ದರೂ ಇದೊಂದು ಸೂಕ್ತ ಕ್ರಮವಾಗಿದೆ.

## ತಲಾಕ್‌ನ ಅವಕಾಶ

ಸುಧಾರಣೆಯ ಪ್ರಯತ್ನದ ನಂತರವೂ ದಂಪತಿಗಳಿಗೆ ತಮ್ಮ ಸಂಬಂಧ ಮುಂದುವರಿಸಲು, ನಿಭಾಯಿಸುವುದು ಅಸಾಧ್ಯವೆಂದೆನಿಸಿದರೆ ಇಸ್ಲಾಮ್ ಪತಿಗೆ ತಲಾಕ್ ಮತ್ತು ಪತ್ನಿಗೆ ಖುಲಾದ ಮಾರ್ಗ ಸೂಚಿಸಿದೆ. ಸಂಬಂಧ ಎಷ್ಟೇ ಕೆಟ್ಟು ಹೋದರೂ ಪತಿ ಪತ್ನಿಯರ ಜೀವನ ಎಷ್ಟು ದುರ್ಭರವಾದರೂ ತಲಾಕ್ ಅಥವಾ ಖುಲಾಗೆ ಅವಕಾಶವಿಲ್ಲವೆಂದು ಇಸ್ಲಾಮ್ ಹೇಳಲಿಲ್ಲ, ಅರಬರಲ್ಲಿ ತಲಾಕ್‌ಗೆ ಯಾವುದೇ ಮಿತಿಯಿರಲಿಲ, ಪತಿಯು ತನಗಿಷ್ಟ ಬಂದಾಗ ತಲಾಕ್ ಕೊಡುತ್ತಿದ್ದನು, ಇಷ್ಟ ಬಂದಾಗ ಮರಳಿ ಪಡೆಯುತ್ತಿದ್ದನು. ಈ ರೀತಿಯಲ್ಲಿ ಅವನು ಪತ್ನಿಯನ್ನು ಜೀವಮಾನವಿಡೀ ಸತಾಯಿಸಬಹುದಾಗಿತ್ತು. ಇದ್ದತ್‌ನ ಅವಧಿಯಲ್ಲಿ ಮರಳಿಸಿಕೊಳ್ಳುವ ಸಾಧ್ಯತೆಯೊಂದಿಗೆ ತಲಾಕ್‌ನ ಹಕ್ಕು ಗರಿಷ್ಠ ಎರಡು ಬಾರಿ ಮಾತ್ರವಿರುವುದೆಂದು ಕುರ್‌ಆನ್ ಹೇಳಿತು.

اَلطَّلَاقُ مَرَّتٰنِ ۪ فَاِمْسَاكٌۢ بِمَعْرُوْفٍ اَوْ تَسْرِيْحٌۢ بِاِحْسَانٍ ؕ

ತಲಾಕ್ ಎರಡು ಸಲ, ಅನಂತರ ನ್ಯಾಯೋಚಿತವಾಗಿ ಸ್ತ್ರೀಯನ್ನು ತಡೆದಿರಿಸಿಕೊಳ್ಳಬೇಕು ಅಥವಾ ಯೋಗ್ಯರೀತಿಯಿಂದ ಅವಳನ್ನು ಬಿಡುಗಡೆಗೊಳಿಸಬೇಕು.

(ಪವಿತ್ರ ಕುರ್‌ಆನ್, 2:229)

ಸೂಕ್ತದಲ್ಲಿ ಮರಳಿಸಬಹುದಾದ ತಲಾಕ್‌ನ ಪ್ರಸ್ತಾಪವಿದೆ. ಒಂದರ ನಂತರ ಇನ್ನೊಂದರಂತೆ ಎರಡು ಸಲ ಮಾತ್ರ ಪುರುಷನಿಗೆ ತಲಾಕ್‌ನ ಹಕ್ಕು ಇರುವುದು. ಇದರಲ್ಲಿ ಅವನು ಮೂರು ಋತುಚಕ್ರಗಳ ಅಥವಾ ಮೂರು ತಿಂಗಳ ಇದ್ದತ್ ಅವಧಿಯಲ್ಲಿ ಮರಳಿ ಪಡೆಯಬಹುದು. ಮರಳಿ ಪಡೆಯುವುದಾದರೆ ನ್ಯಾಯೋಚಿತವಾಗಿ ವ್ಯವಹರಿಸಲಿ ಮತ್ತು ವಿಚ್ಛೇದನದ ತೀರ್ಮಾನ ಮಾಡಿದ್ದರೆ ಉತ್ತಮ ರೀತಿಯಲ್ಲಿ ಬಿಡುಗಡೆಗೊಳಿಸಬೇಕೆಂದು ಆದೇಶಿಸಿದೆ. ಇದ್ದತ್ ಅವಧಿ ಕಳೆದರೂ ಮರಳಿ ಪಡೆಯಲಿಲ್ಲವೆಂದಾದರೆ ಹೊಸತಾಗಿ ನಿಕಾಹ್ ಮಾಡಬೇಕಾಗುತ್ತದೆ. ಮೂರನೆಯ ಸಲ ತಲಾಕ್ ನೀಡಿದರೆ ಮರಳಿ ಪಡೆಯುವ ಹಕ್ಕು ಉಳಿಯುವುದಿಲ್ಲ. ಪುನಃ ಆ ಮಹಿಳೆಯೊಂದಿಗೆ ದಾಂಪತ್ಯ ಜೀವನ ನಡೆಸಲು ಇಚ್ಛಿಸಿದರೆ ಅದಕ್ಕಿರುವ ಮಾರ್ಗ ತುಂಬಾ ದೀರ್ಘವಾಗಿದೆ. ಕುರ್‌ಆನ್ ಆದೇಶಿಸುತ್ತದೆ:-

فَإِن طَلَّقَهَا فَلَا تَحِلُّ لَهُ مِن بَعْدُ حَتَّىٰ تَنكِحَ زَوْجًا غَيْرَهُ

**ಮೂರನೇ ಬಾರಿಯೂ ತಲಾಕ್ ಕೊಟ್ಟುಬಿಟ್ಟರೆ ಆ ಸ್ತ್ರೀಯ ನಿಕಾಹ್ ಇನ್ನೊಬ್ಬನೊಂದಿಗೆ ಆಗಿ ಅವನು ತಲಾಕ್ ಕೊಡುವ ಹೊರತು ಅವಳು ಪುನಃ ಮೊದಲಿನ ಪತಿಗೆ ಹಲಾಲ್ ಆಗಲಾರಳು. (ಪವಿತ್ರ ಕುರ್‌ಆನ್, 2:230)**

ತಲಾಕ್ ಪಡೆದ (ವಿಚ್ಛೇದಿತ) ಮಹಿಳೆಯನ್ನು ಪುನಃ ವಿವಾಹವಾಗುವುದರಿಂದ ತಡೆಯಲಾಗದು. ಮೂರು ತಲಾಕ್ ಆಗಿರುವುದರಿಂದ ಅವಳು ಇನ್ನು ಜೀವಮಾನವಿಡೀ ಮನೆಯಲ್ಲಿ ಕುಳಿತುಕೊಂಡಿರಬೇಕೆಂಬ ನಿಯಮವಿಲ್ಲ. ಕುರ್‌ಆನ್ ಹೇಳಿದಂತೆ ಇದ್ದತ್ ಅವಧಿ ಕಳೆದ ಬಳಿಕ ಅವಳು ಬೇರೆ ವಿವಾಹವಾಗಬಹುದು. ಅದರ ನಂತರ ಅವಳ ಪತಿ ಮರಣ ಹೊಂದಿದರೆ ಅಥವಾ ಅವಳಿಗೆ ತಲಾಕ್ ನೀಡಿದರೆ (ಈ ವಿಷಯಕ್ಕೆ 10-20 ವರ್ಷಗಳೂ ಕಳೆಯಬಹುದು. ಅಥವಾ ಒಂದೆರಡು ತಿಂಗಳಲ್ಲೇ ಆಗಬಹುದು) ಹಿಂದಿನ ಅನುಭವದ ನಂತರ ಮತ್ತು ಈ ಪರಿಸ್ಥಿತಿಗಳಿಂದ ಹಾದು ಹೋದ ನಂತರ ಅವಳ ಮಾಜಿ ಪತಿ ಮತ್ತು ಮಹಿಳೆ ಇಚ್ಛಿಸಿದರೆ ಅವರು ಹೊಸತಾಗಿ ದಾಂಪತ್ಯಜೀವನ ಆರಂಭಿಸಬಹುದು. ಪುರುಷನು ತಲಾಕ್ ಮತ್ತು ಮರಳಿ ಪಡೆಯುವ ಈ ಪ್ರಕ್ರಿಯೆಯನ್ನು ಹಾಸ್ಯ ಅಥವಾ ಗೇಲಿ ಮಾಡದಿರಲು ಹಾಗೂ ಮೂರನೆಯ ಬಾರಿ ತಲಾಕ್ ಕೊಟ್ಟರೆ ಪುನಃ ಪತ್ನಿಯೊಂದಿಗೆ ಸಂಬಂಧ ಸ್ಥಾಪನೆ ಸುಲಭವಲ್ಲವಾದ್ದರಿಂದ ಮೊದಲೇ ಸಾವಿರ ಬಾರಿ ಆಲೋಚಿಸಬೇಕು ಎಂದು ಈ ಕಠಿಣ ಮಾರ್ಗವನ್ನು ಅಳವಡಿಸಲಾಗಿದೆ.

## ಮೂರು ತಲಾಕ್‌ಗಳ ಸಮಸ್ಯೆ

ತಲಾಕ್ ಸಮಯದ ಅಂತರದೊಂದಿಗೆ ಶುದ್ಧಿಕಾಲದಲ್ಲಿ ನೀಡುವಂತೆ ಹದೀಸ್‌ನಲ್ಲಿ ಆದೇಶಿಸಲಾಗಿದೆ. ಒಂದು ಸಲ ತಲಾಕ್ ನೀಡಿದ ನಂತರ ಪುರುಷನು ಇದ್ದತ್ ಅವಧಿ ಮುಗಿಯಲು ಅವಕಾಶ ಕೊಡಬೇಕಾದುದು ಸುನ್ನತ್‌ನ ವಿಧಾನವಾಗಿದೆ. ಮುಂದೆ ಅವರು ಇಚ್ಛಿಸಿದರೆ ಮರು ನಿಕಾಹ್ ಮಾಡಬಹುದು. ಪ್ರವಾದಿ ಸಂಗಾತಿಗಳು ಇದನ್ನೇ ಪಾಲಿಸುತ್ತಿದ್ದರು. ಒಬ್ಬ ಪುರುಷನು ತನ್ನ ಪತ್ನಿಗೆ ಒಂದು ತಲಾಕ್ ಕೊಟ್ಟು ಪತಿ ಪತ್ನಿಯರ ಸಂಬಂಧ

ಬೇರ್ಪಟ್ಟಿದ್ದು, ಇದ್ದತ್‌ನ ಅವಧಿ ಮುಗಿದ ಬಳಿಕ ಪುರುಷನು ಇಚ್ಛಿಸಿದರೆ ಆ ಮಹಿಳೆಯನ್ನು ಪುನಃ ವಿವಾಹವಾಗಬಹುದು. ಈ ಬಗ್ಗೆ ಎಲ್ಲ ವಿದ್ವಾಂಸರ ಒಮ್ಮತವಿದೆ. ಆದರೆ ಯಾರಾದರೂ ಈ ಕ್ರಮವನ್ನು ಬಿಟ್ಟು ಒಂದೇ ಸಲ ಮೂರು ತಲಾಕ್ ಕೊಟ್ಟರೆ ಅವನ ತಲಾಕ್‌ನ ಹಕ್ಕು ಮುಗಿಯುತ್ತದೋ ಅವನು ಅವಳನ್ನು ಮರಳಿ ಪಡೆಯಬಹುದೋ ಇಲ್ಲವೋ ಎಂಬ ಪ್ರಶ್ನೆ ಸದಾ ಚರ್ಚೆಯಲ್ಲಿತ್ತು. ಹೆಚ್ಚಿನ ವಿದ್ವಾಂಸರ ಪ್ರಕಾರ, ಪತಿಗೆ ಮೂರು ತಲಾಕ್‌ಗಳ ಹಕ್ಕು ನೀಡಲಾಗಿದ್ದು ಒಂದು ವೇಳೆ ಅವನು ಒಂದೇ ಸಲ ಅವುಗಳನ್ನು ಪ್ರಯೋಗಿಸಿದ್ದರೆ ಅವುಗಳನ್ನು ಮೂರು ಎಂದೇ ಪರಿಗಣಿಸಲಾಗುವುದು. ಕೆಲವು ವಿದ್ವಾಂಸರ ಅಭಿಪ್ರಾಯವೇನೆಂದರೆ ಹದೀಸ್‌ನಿಂದ ತಿಳಿಯುವಂತೆ ಒಬ್ಬನು ಒಂದೇ ಸಲ ಮೂರಲ್ಲ 300 ತಲಾಕ್ ಹೇಳಿದರೂ ಅವುಗಳನ್ನು ಒಂದೇ ಎಂದು ಪರಿಗಣಿಸಲಾಗುವುದು ಮತ್ತು ಅವನಿಗೆ ಮರಳಿ ಪಡೆಯುವ ಹಕ್ಕು ಇರುವುದು. ಒಂದು ತಲಾಕ್ ಅಂತೂ ಆಗಿಯೇ ಬಿಡುತ್ತದೆ. ಒಂದೇ ಬಾರಿಗೆ ಮೂರು ತಲಾಕ್ ಹೇಳಿದರೆ ತಲಾಕ್ ಆಗುವುದೇ ಇಲ್ಲವೆಂದು ಯಾರ ಅಭಿಪ್ರಾಯವೂ ಇಲ್ಲ, ಎಲ್ಲರ ಅಭಿಪ್ರಾಯದಂತೆ ತಲಾಕ್ ಆಗುತ್ತದೆ. ಭಿನ್ನಾಭಿಪ್ರಾಯವಿರುವುದು ಒಂದೇ ಬಾರಿಗೆ ಪುನರಾವರ್ತಿಸಿದ ಮೂರು ತಲಾಕ್‌ಗಳನ್ನು ಒಂದೆಂದು ಪರಿಗಣಿಸುವುದೋ ಅಥವಾ ಮೂರೆಂದೋ? ಇದೊಂದು ಕಾನೂನಾತ್ಮಕ ಚರ್ಚೆ. ಒಬ್ಬನು ತನ್ನ ಪತ್ನಿಯಿಂದ ಬೇಗನೆ ಬಿಡುಗಡೆಯಾಗಬೇಕೆಂದು ಬಯಸಿದರೆ ಸ್ಥಳ ಅಥವಾ ಸಮಯ ಬದಲಾಯಿಸಿ, ಇಂದು ಒಂದು ನಾಳೆ ಎರಡನೆಯದು, ನಾಡಿದ್ದು ಮೂರನೆ ತಲಾಕ್ ಕೊಡಬಹುದು. ಈ ಬಗ್ಗೆ ಯೋಚಿಸಬಹುದಾದ ಒಂದು ಅಭಿಪ್ರಾಯವೇನೆಂದರೆ ಒಬ್ಬನು ಒಂದೇ ಬಾರಿ ತಲಾಕ್, ತಲಾಕ್, ತಲಾಕ್ ಮೂರು ಸಲ ಒತ್ತಿ ಹೇಳಿಯೂ ಅವನ ಇಂಗಿತ ಕೇವಲ ಒಂದೇ ಎಂದಾಗಿದ್ದರೆ ಅದನ್ನು ಹಾಗೆಯೇ ಪರಿಗಣಿಸಬೇಕು.

## ಮಕ್ಕಳ ಪೋಷಣೆ ಮತ್ತು ಶಿಕ್ಷಣ, ತರಬೇತಿಯ ಹೊಣೆ ತಂದೆ-ತಾಯಿಗಳಿಬ್ಬರ ಮೇಲೂ ಇದೆ.

ಇಸ್ಲಾಮಿ ಕಾನೂನಿನಂತೆ ಮಕ್ಕಳ ವಂಶ ತಂದೆಯಿಂದ ಗುರುತಿಸಲ್ಪಡುತ್ತದೆ ಹಾಗೂ ತಂದೆಯೇ ಮಕ್ಕಳ ಮೇಲ್ವಿಚಾರಕ, ಪ್ರಾಯೋಜಕನಾಗಿದ್ದು ಮಕ್ಕಳ ಆರ್ಥಿಕ ಹೊಣೆಗಾರಿಕೆಗಳನ್ನು ನಿರ್ವಹಿಸುತ್ತಾನೆ. ಇದರ ಅರ್ಥ ಮಕ್ಕಳನ್ನು ತಾಯಿಯೊಂದಿಗೆ ಗುರುತಿಸಬಾರದೆಂದೇನಲ್ಲ. ಕಾನೂನಿನ ವಿಷಯ ಬೇರೆ. ಮಕ್ಕಳು ತಾಯಿಯಿಂದಲೂ ಗುರುತಿಸಲ್ಪಡಬಹುದು. ಈ ಮಹಿಳೆಯ ಮಕ್ಕಳೆಂದು ಕರೆಯುವುದು ತಪ್ಪಾಗಲಾರದು. ಕುರ್‌ಆನ್ ಮಕ್ಕಳನ್ನು ತಂದೆಯಿಂದಲೂ ತಾಯಿಯಿಂದಲೂ ಗುರುತಿಸಿದೆ. ಕುರ್‌ಆನ್ ಆದೇಶಿಸುತ್ತದೆ :-

وَالْوَالِدٰتُ يُرْضِعْنَ اَوْلَادَهُنَّ حَوْلَيْنِ كَامِلَيْنِ لِمَنْ اَرَادَ اَنْ يُّتِمَّ الرَّضَاعَةَ ؕ
وَعَلَى الْمَوْلُوْدِ لَهٗ رِزْقُهُنَّ وَكِسْوَتُهُنَّ بِالْمَعْرُوْفِ ؕ لَا تُكَلَّفُ نَفْسٌ اِلَّا وُسْعَهَا ۚ لَا

تُضَآرَّ وَالِدَةٌۢ بِوَلَدِهَا وَلَا مَوْلُودٌ لَّهٗ بِوَلَدِهٖ

ತಮ್ಮ ಶಿಶುಗಳು ಪೂರ್ಣ ಸ್ತನಪಾನಾವಧಿಯವರೆಗೆ ಹಾಲು ಕುಡಿಯಬೇಕೆಂದು ಪಿತರು ಬಯಸಿದರೆ, ತಾಯಂದಿರು ತಮ್ಮ ಶಿಶುಗಳಿಗೆ ಎರಡು ವರ್ಷ ಪೂರ್ತಿಯಾಗಿ ಹಾಲುಣಿಸಬೇಕು. ಆಗ ಶಿಶುವಿನ ತಂದೆಯು ಅವರಿಗೆ ನ್ಯಾಯೋಚಿತ ರೀತಿಯಿಂದ ಅನ್ನ, ಬಟ್ಟೆ ಕೊಡಲು ಬಾಧ್ಯಸ್ತನಾಗುವನು. ಆದರೆ ಅವನವನ ಶಕ್ತಿಗಿಂತ ಮೀರಿದ ಭಾರವನ್ನು ಯಾರ ಮೇಲೂ ಹಾಕಬಾರದು. ಶಿಶುವು ತಾಯಿಯದ್ದು ಎಂಬ ಕಾರಣದಿಂದ ಅವಳನ್ನು ಕಷ್ಟಕ್ಕೊಳಪಡಿಸಬಾರದು ಮತ್ತು ಶಿಶುವಿನ ತಂದೆಯೆಂಬ ಕಾರಣದಿಂದ ಅವನನ್ನೂ ಪೇಚಾಟಕ್ಕೊಳಪಡಿಸಬಾರದು. (ಪವಿತ್ರ ಕುರ್‌ಆನ್, 2:233)

ಈ ಸೂಕ್ತದಲ್ಲಿ ಮಗುವನ್ನು ತಂದೆ ತಾಯಿ ಇಬ್ಬರೊಂದಿಗೂ ಗುರುತಿಸಲಾಗಿದೆ ಮತ್ತು ಕಾನೂನಿನ ದೃಷ್ಟಿಯಿಂದ ಮಕ್ಕಳ ಖರ್ಚು ವೆಚ್ಚ ತಂದೆಯ ಹೊಣೆಗಾರಿಕೆಯಾಗಿದೆ. ಆದರೆ ತಾಯಿಯ ಮೂಲಕವೂ ಮಕ್ಕಳನ್ನು ಗುರುತಿಸಬಹುದು.

ಪವಿತ್ರ ಕುರ್‌ಆನಿನಲ್ಲಿ ಹಝ್ರತ್ ಮರ್ಯಮ್‌ರ ತಾಯಿಯಾಗಿದ್ದ, ಇಮ್ರಾನ್‌ನ ಹೆಂಡತಿಯ ಹರಕೆಯ ಪ್ರಸ್ತಾಪವಿದೆ:

اِذْ قَالَتِ امْرَاَتُ عِمْرٰنَ رَبِّ اِنِّىْ نَذَرْتُ لَكَ مَا فِىْ بَطْنِىْ مُحَرَّرًا فَتَقَبَّلْ مِنِّىْ ۚ اِنَّكَ اَنْتَ السَّمِيْعُ الْعَلِيْمُ ۝

ಇಮ್ರಾನನ ಸ್ತ್ರೀಯು, ಓ ನನ್ನ ಪ್ರಭೂ, ನಾನು ನನ್ನ ಗರ್ಭದಲ್ಲಿರುವ ಶಿಶುವನ್ನು ನಿನಗೆ ಹರಕೆಯಾಗಿ ಒಪ್ಪಿಸುತ್ತೇನೆ. ಅದು ನಿನ್ನ ಕಾರ್ಯಕ್ಕಾಗಿಯೇ ಸಮರ್ಪಿಸಲ್ಪಡುವುದು. ನನ್ನ ಈ ಕಾಣಿಕೆಯನ್ನು ಸ್ವೀಕರಿಸು. ನಿಶ್ಚಯವಾಗಿಯೂ ನೀನು ಸರ್ವಶ್ರುತನೂ ಸರ್ವಜ್ಞನೂ ಆಗಿರುವೆ ಎಂದು ಹೇಳುತ್ತಿದ್ದಳು. (ಪವಿತ್ರ ಕುರ್‌ಆನ್, 3: 35)

ಈ ಸೂಕ್ತದ ಆಧಾರದಲ್ಲಿ ಪ್ರಸಿದ್ಧ ಹನಫಿ ವಿದ್ವಾಂಸ ಅಲ್ಲಾಮಾ ಅಬೂಬಕರ್ ಜಸ್ಸಾಸ್‌ರಾಝೀ ಹೇಳುತ್ತಾರೆ-

ಇದರಿಂದ ತಿಳಿಯುವುದೇನೆಂದರೆ ತಾಯಿಗೆ ಮಕ್ಕಳ ಸಂಸ್ಕರಣೆ, ಶಿಕ್ಷಣ, ಧರ್ಮದ ಮಾರ್ಗದಲ್ಲಿ ತೊಡಗಿಸುವುದು ಮತ್ತು ತರಬೇತಿಯ ಕುರಿತು ಒಂದು ರೀತಿಯಲ್ಲಿ ಯಜಮಾನಿಕೆಯ ಸ್ಥಾನವಿದೆ. ಅವಳು ಮೇಲ್ವಿಚಾರಕಳಾಗಬಹುದು. ಆದಿಲ್ಲದಿದ್ದರೆ ಇಮ್ರಾನನ ಹೆಂಡತಿ ಈ ವಿಷಯದ ಹರಕೆ ಹೇಳುತ್ತಿರಲಿಲ್ಲ, ಅದೇ ರೀತಿ ತಂದೆ ಹೆಸರಿಡದಿದ್ದರೆ ತಾಯಿಗೆ ತನ್ನ ಮಗುವಿಗೆ ಹೆಸರಿಡುವ ಹಕ್ಕು ಇದೆ. ಈ ಹೆಸರು ಸಮ್ಮತವಾಗಿರುವುದು.

(ಅಬೂಬಕರ್ ಜಸ್ಸಾಸ್, ಅಹ್‌ಕಾಮುಲ್ ಕುರ್‌ಆನ್: 2/14)

ಮಕ್ಕಳ ಖರ್ಚು ವೆಚ್ಚ ಭರಿಸುವುದು ಮತ್ತು ಅದಕ್ಕಾಗಿ ಶ್ರಮಿಸುವುದು ತಂದೆಯ ಹೊಣೆಗಾರಿಕೆಯಾಗಿದೆ.

وَعَلَى الْمَوْلُوْدِ لَهٗ رِزْقُهُنَّ وَكِسْوَتُهُنَّ بِالْمَعْرُوْفِ ۭ

ಶಿಶುವಿನ ತಂದೆಯು ಹಾಲುಣಿಸುವ ತಾಯಿಗೆ(ವಿಚ್ಛೇದಿತ ಪತ್ನಿ) ನ್ಯಾಯೋಚಿತ ರೀತಿಯಿಂದ ಅನ್ನ ಬಟ್ಟೆಕೊಡಲು ಬಾಧ್ಯಸ್ತನಾಗುವನು. (ಪವಿತ್ರ ಕುರ್‌ಆನ್, 2:233)

ಇದೇ ರೀತಿ ಅವರ ಸೂಕ್ತ ಶಿಕ್ಷಣ ಮತ್ತು ತರಬೇತಿಯೂ ತಂದೆತಾಯಿಗಳ ಕರ್ತವ್ಯವಾಗಿದೆ. ತಂದೆ ತಾಯಿಗಳು ಇದರ ಪ್ರಾಯೋಗಿಕ ಮಾದರಿಗಳನ್ನು ಪ್ರದರ್ಶಿಸಬೇಕು. ಮಕ್ಕಳನ್ನು ನರಕದಿಂದ ರಕ್ಷಿಸುವ ಚಿಂತೆಯಿರಬೇಕು. ಸ್ವತಃ ತನ್ನನ್ನೂ ನರಕದಿಂದ ರಕ್ಷಿಸಿಕೊಳ್ಳಬೇಕು.

يَٰٓأَيُّهَا ٱلَّذِينَ ءَامَنُوا۟ قُوٓا۟ أَنفُسَكُمْ وَأَهْلِيكُمْ نَارًا

ಸತ್ಯ ವಿಶ್ವಾಸಿಗಳೇ, ಮಾನವರೂ ಶಿಲೆಗಳೂ ಇಂಧನವಾಗಲಿರುವ ಅಗ್ನಿಯಿಂದ ನಿಮ್ಮನ್ನೂ ನಿಮ್ಮ ಕುಟುಂಬದವರನ್ನೂ ರಕ್ಷಿಸಿಕೊಳ್ಳಿರಿ. (ಪವಿತ್ರ ಕುರ್‌ಆನ್, 66:6)

ಈ ಸೂಕ್ತದಲ್ಲಿ ತಿಳಿಸಿದಂತೆ ಪುರುಷನು ತನ್ನನ್ನು ಸ್ವತಃ ನರಕದಿಂದ ರಕ್ಷಿಸಿಕೊಳ್ಳುವುದು ಅವನ ಪ್ರಥಮ ಹೊಣೆಗಾರಿಕೆಯಾಗಿದೆ ಹಾಗೂ ತನ್ನ ಪತ್ನಿ ಮಕ್ಕಳನ್ನು ರಕ್ಷಿಸುವುದು ದ್ವಿತೀಯ ಹೊಣೆಗಾರಿಕೆಯಾಗಿದೆ. ಇದರಲ್ಲಿ ಮನುಷ್ಯ ಇತರರನ್ನು ಸುಧಾರಿಸುವುದಕ್ಕಿಂತ ಮುಂಚೆ ಸ್ವತಃ ಮಾದರಿಯಾಗಬೇಕು ಮತ್ತು ತನ್ನ ಮನೆಯನ್ನು ಮಾದರಿಯಾಗಿ ಮಾಡಬೇಕೆಂದು ಸೂಚಿಸಲಾಗಿದೆ. ಮನೆ ಮಾದರಿಯಾಗದಿದ್ದರೆ ಸುಧಾರಣೆಯಾಗುವುದು ಸಾಧ್ಯವಿಲ್ಲ. ಈ ವಿಷಯವನ್ನು ಕುರ್‌ಆನಿನಲ್ಲಿ ಪ್ರವಾದಿ ಪತ್ನಿಯರನ್ನು ಅಭಿಸಂಬೋಧಿಸಿ ಹೇಳಲಾಗಿದೆ.

وَٱذْكُرْنَ مَا يُتْلَىٰ فِى بُيُوتِكُنَّ مِنْ ءَايَٰتِ ٱللَّهِ وَٱلْحِكْمَةِ

ನಿಮ್ಮ ಮನೆಗಳಲ್ಲಿ ಓದಿ ಹೇಳಲಾಗುತ್ತಿರುವ ಅಲ್ಲಾಹನ ಸೂಕ್ತಗಳನ್ನೂ ಯುಕ್ತಿಪೂರ್ಣ ಮಾತುಗಳನ್ನೂ ಚೆನ್ನಾಗಿ ನೆನಪಿಡಿರಿ. (ಪವಿತ್ರ ಕುರ್‌ಆನ್, 33:34)

ಇಲ್ಲಿ ನಮ್ಮ ಮನೆಗಳು ಸಂದೇಶ ಪ್ರಚಾರದ ಕೇಂದ್ರವಾಗಬೇಕೆಂದು ಉಪದೇಶಿಸಲಾಗಿದೆ.

## ಮಕ್ಕಳ ಹತ್ಯೆಗೆ ಯಾವ ಸ್ಥಿತಿಯಲ್ಲಿಯೂ ಅನುಮತಿಯಿಲ್ಲ

ಹುಟ್ಟುವ ಪ್ರತಿಯೊಬ್ಬ ಮನುಷ್ಯ ಜೀವಿಸುವ ಹಕ್ಕನ್ನು ಪಡೆದುಕೊಂಡೇ ಹುಟ್ಟುತ್ತಾನೆಂದು ಪವಿತ್ರ ಕುರ್‌ಆನ್ ಸ್ಪಷ್ಟಪಡಿಸುತ್ತದೆ. ಅವನ ಈ ಹಕ್ಕನ್ನು ಯಾರೂ ಕಸಿಯುವಂತಿಲ್ಲ. ತಂದೆ ತಾಯಿಗಳೂ ಮಕ್ಕಳಿಂದ ಜೀವಿಸುವ ಹಕ್ಕನ್ನು ಕಸಿಯುವಂತಿಲ್ಲ. ಇದು ಕಾನೂನು ಪ್ರಕಾರ ಅಪರಾಧವಾಗಿದೆ. ಈ ವಿಷಯವನ್ನು ಕುರ್‌ಆನಿನಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿದೆ. ಅರೇಬಿಯಾದಲ್ಲಿ ಬಡತನ ಮತ್ತಿತರ ಕಾರಣಗಳಿಂದ ಮಕ್ಕಳ ಹತ್ಯೆಯ ಪ್ರಕರಣಗಳು ನಡೆಯುತ್ತಿದ್ದವು. ಕುರ್‌ಆನ್ ಹೇಳಿತು.

وَلَا تَقْتُلُوٓا۟ أَوْلَٰدَكُم مِّنْ إِمْلَٰقٍ ۖ نَّحْنُ نَرْزُقُكُمْ وَإِيَّاهُمْ

ನಿಮ್ಮ ಮಕ್ಕಳನ್ನು ದಾರಿದ್ರ್ಯದ ಭಯದಿಂದ ವಧಿಸಬೇಡಿರಿ. ನಾವು ನಿಮಗೂ ಜೀವನೋಪಾಧಿಯನ್ನು ನೀಡುತ್ತೇವೆ. ಅವರಿಗೂ ನೀಡುವೆವು.

(ಪವಿತ್ರ ಕುರ್‌ಆನ್, 6:151)

ಕೆಲವೊಮ್ಮೆ ಬಡತನಕ್ಕಿಂತಲೂ ಹೆಚ್ಚು ಬಡತನದ ಭಯದಿಂದಲೇ ಮಕ್ಕಳ ಹತ್ಯೆ ನಡೆಯುತ್ತಿತ್ತು. ಕುರ್‌ಆನ್ ಇದನ್ನೂ ತಡೆಯಿತು.

وَلَا تَقْتُلُوٓا أَوْلَـٰدَكُمْ خَشْيَةَ إِمْلَـٰقٍ ۖ نَّحْنُ نَرْزُقُهُمْ وَإِيَّاكُمْ ۚ إِنَّ قَتْلَهُمْ كَانَ خِطْـًٔا كَبِيرًا ﴿٣١﴾

ನಿಮ್ಮ ಮಕ್ಕಳನ್ನು ಬಡತನದ ಭೀತಿಯಿಂದ ಕೊಲ್ಲಬೇಡಿರಿ, ನಾವು ಅವರಿಗೂ ಆಹಾರ ನೀಡುವೆವು, ನಿಮಗೂ ನೀಡುವೆವು, ವಾಸ್ತವದಲ್ಲಿ ಅವರ ವಧೆಯು ಒಂದು ಘೋರ ಅಪರಾಧವಾಗಿದೆ. (ಪವಿತ್ರ ಕುರ್‌ಆನ್, 17:31)

ಮಕ್ಕಳ ಕೊಲೆಗೆ ಯಾವುದೇ ಕಾರಣ ನೀಡುವಂತಿಲ್ಲ, ಆದ್ದರಿಂದ ಕುರ್‌ಆನ್ ಇದನ್ನು ಅಜ್ಞಾನ ಮತ್ತು ಅನಾಗರಿಕ ಕೃತ್ಯ ಹಾಗೂ ವ್ಯಕ್ತಿ ಮತ್ತು ಕೋಮಿನ ನಷ್ಟವೆಂದು ಸಾರಿತು.

قَدْ خَسِرَ ٱلَّذِينَ قَتَلُوٓا أَوْلَـٰدَهُمْ سَفَهًۢا بِغَيْرِ عِلْمٍ

ನಿಶ್ಚಯವಾಗಿಯೂ ತಮ್ಮ ಮಕ್ಕಳನ್ನು ಅಜ್ಞಾನ ಮತ್ತು ತಿಳಿಗೇಡಿತನದಿಂದ ವಧಿಸಿದವರು ನಷ್ಟದಲ್ಲಿ ಬಿದ್ದರು (ಪವಿತ್ರ ಕುರ್‌ಆನ್, 6:140)

ಮನುಷ್ಯ ತನ್ನ ಸಂತಾನವನ್ನೇ ಕೊಲೆ ಮಾಡುವುದು ಅತ್ಯಂತ ಅನಾಗರಿಕ ಮತ್ತು ಕಠೋರ ಹೃದಯದ ಕೃತ್ಯವಾಗಿದೆ. ತಮ್ಮ ಮೂರ್ಖತನದಿಂದ ಇಂತಹ ಕಾರ್ಯವನ್ನೆಸಗುವವರು ಅತ್ಯಂತ ನಷ್ಟದಲ್ಲಿದ್ದಾರೆಂದು ಕುರ್‌ಆನ್ ಹೇಳಿತು. ಇದರಿಂದ ವಂಶ ನಾಶವಾಗಿ ಕೋಮಿನ ಜನಬಲ ಕುಗ್ಗುತ್ತದೆ. ಇದು ಎಲ್ಲ ರೀತಿಯಿಂದಲೂ ನಷ್ಟದ ವ್ಯವಹಾರ. ಇಂತಹವರು ಸ್ವತಃ ಚಿಂತಿಸಬೇಕು.

## ತಂದೆ ತಾಯಿಗಳ ಹಕ್ಕುಗಳು

ಪವಿತ್ರ ಕುರ್‌ಆನಿನಲ್ಲಿ ಮಕ್ಕಳ ಬಗ್ಗೆ ತಂದೆ ತಾಯಿಗಳ ಹೊಣೆಗಾರಿಕೆಗಳನ್ನು ಪ್ರಸ್ತಾಪಿಸುವುದರ ಜೊತೆಗೆ ಮಕ್ಕಳಿಗೂ ತಂದೆ ತಾಯಿಗಳೊಂದಿಗೆ ಸದ್ವರ್ತನೆ ಮತ್ತು ಅವರ ಆವಶ್ಯಕತೆಗಳನ್ನು ಪೂರೈಸುವ ಆದೇಶ ನೀಡಲಾಗಿದೆ.

وَصَاحِبْهُمَا فِي ٱلدُّنْيَا مَعْرُوفًا

ಈ ಲೋಕದಲ್ಲಿ ಅವರೊಂದಿಗೆ ಸದ್ವರ್ತನೆ ಮಾಡುತ್ತಿರು. (ಪವಿತ್ರ ಕುರ್‌ಆನ್, 31:15)

ಹೆತ್ತವರೊಂದಿಗೆ ಉತ್ತಮವಾಗಿ ವ್ಯವಹರಿಸುವ ಆದೇಶದಲ್ಲಿ ಅವರ ಖರ್ಚುವೆಚ್ಚ ಅಗತ್ಯಗಳ ಪೂರೈಕೆಯೂ ಸೇರಿದೆ. ಒಂದು ಕಡೆ ಅವರೊಂದಿಗೆ ಔದಾರ್ಯದ ನಿಲುವು ತಾಳುವಂತೆ ಆದೇಶಿಸಿದೆ. ಇದರಲ್ಲಿ ಕಾನೂನು ಬದ್ಧ ಹೊಣೆಗಾರಿಕೆಗಳನ್ನು ನಿರ್ವಹಿಸುವುದು ಮಾತ್ರವಲ್ಲ, ಅವರನ್ನು ಗೌರವಿಸುವ ಅಂಶವೂ ಇದೆ. ಇದರ ಜೊತೆಗೆ ಅವರಿಗಾಗಿ ಪ್ರಾರ್ಥಿಸಲು ಮತ್ತು ಸಾಧ್ಯವಿರುವ ಎಲ್ಲ ಸೇವೆಗಳನ್ನು ಮಾಡಿಕೊಂಡು ಅವರ ಕುಂದುಕೊರತೆಗಳನ್ನು ಒಪ್ಪಿಕೊಳ್ಳುವ ಸ್ವಭಾವವಿರಬೇಕೆಂದು ಹೇಳಲಾಗಿದೆ. ವಿಶೇಷತಃ ಅವರ ವೃದ್ಧಾಪ್ಯದಲ್ಲಿ, ಅವರು ಮಕ್ಕಳ ಮೇಲೆ ಆಶ್ರಿತರಾದಾಗ, ಸ್ವಭಾವದಲ್ಲಿ ಚಂಚಲತೆ(ಕಿರಿಕಿರಿ)

ಉಂಟಾದಾಗ ಅವರೊಂದಿಗೆ ಉತ್ತಮವಾಗಿ ವ್ಯವಹರಿಸುವಂತೆ ಆಜ್ಞಾಪಿಸಲಾಗಿದೆ.

وَ قَضٰى رَبُّكَ اَلَّا تَعْبُدُوْۤا اِلَّاۤ اِيَّاهُ وَبِالْوَالِدَيْنِ اِحْسَانًا ؕ اِمَّا يَبْلُغَنَّ عِنْدَكَ الْكِبَرَ اَحَدُهُمَاۤ اَوْ كِلٰهُمَا فَلَا تَقُلْ لَّهُمَاۤ اُفٍّ وَّ لَا تَنْهَرْهُمَا وَ قُلْ لَّهُمَا قَوْلًا كَرِيْمًا ﴿۲۳﴾ وَ اخْفِضْ لَهُمَا جَنَاحَ الذُّلِّ مِنَ الرَّحْمَةِ وَ قُلْ رَّبِّ ارْحَمْهُمَا كَمَا رَبَّيٰنِيْ صَغِيْرًا ﴿۲۴﴾

ನಿಮ್ಮ ಪ್ರಭು ವಿಧಿಸಿ ಬಿಟ್ಟಿದ್ದಾನೆ; ನೀವು ಕೇವಲ ಅವನೊಬ್ಬನ ಹೊರತು ಇನ್ನಾರ ದಾಸ್ಯ-ಆರಾಧನೆಯನ್ನೂ ಮಾಡಬಾರದು. ಮಾತಾಪಿತರೊಡನೆ ಸೌಜನ್ಯದಿಂದ ವರ್ತಿಸಿರಿ. ಅವರ ಪೈಕಿ ಒಬ್ಬರು ಅಥವಾ ಅವರಿಬ್ಬರೂ ವೃದ್ಧರಾಗಿ ನಿಮ್ಮ ಬಳಿಯಲ್ಲಿದ್ದರೆ, ಅವರ ಬಗ್ಗೆ ಚಕಾರವೆತ್ತಬೇಡಿರಿ ಮತ್ತು ಅವರನ್ನು ಜರೆಯಬೇಡಿರಿ. ಅವರೊಂದಿಗೆ ಗೌರವಪೂರ್ವಕವಾಗಿ ಮಾತನಾಡಿರಿ. ನಯ ವಿನಯ ಮತ್ತು ಕರುಣೆಯೊಂದಿಗೆ ಅವರ ಮುಂದೆ ಬಾಗಿಕೊಂಡಿರಿ. ''ಓ ನನ್ನ ಪ್ರಭೂ, ಇವರು ನನ್ನ ಚಿಕ್ಕಂದಿನಲ್ಲಿ ದಯಾ ವಾತ್ಸಲ್ಯಗಳಿಂದ ನನ್ನನ್ನು ಸಾಕಿದಂತೆಯೇ ನೀನೂ ಅವರ ಮೇಲೆ ಕೃಪೆತೋರು'' ಎಂದು ಪ್ರಾರ್ಥಿಸಿರಿ.

(ಪವಿತ್ರ ಕುರ್‌ಆನ್, 17:23-24)

## ವೃದ್ಧಾಶ್ರಮ

ಇಸ್ಲಾಮೀ ಶಿಕ್ಷಣದಲ್ಲಿ ವೃದ್ಧಾಶ್ರಮಗಳಿಗೆ ಅವಕಾಶವಿದೆಯೇ ಎಂದು ಕೇಳಲಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ವೃದ್ಧಾಶ್ರಮದ ಕಲ್ಪನೆ ಕುರ್‌ಆನಿನ ಶಿಕ್ಷಣಕ್ಕನುಗುಣವಾಗಿಲ್ಲ. اِمَّا يَبْلُغَنَّ عِنْدَكَ الْكِبَرَ (ಒಂದು ವೇಳೆ ನಿಮ್ಮೊಂದಿಗಿರುತ್ತಾ ಅವರು ವೃದ್ಧಾಪ್ಯಕ್ಕೆ ತಲುಪಿದರೆ) ಎಂಬುದರಲ್ಲಿ ತಂದೆ ತಾಯಿಗಳು ನಮ್ಮೊಟ್ಟಿಗಿರಬೇಕೆಂಬ ಸೂಚನೆ ಸಿಗುತ್ತದೆ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಕೆಲವೊಮ್ಮೆ ಪತ್ನಿಯು ಅದಕ್ಕೆ ಒಪ್ಪದ ಕಾರಣ ಮತ್ತು ಪತಿಗೆ ಇದರ ನಿಯಂತ್ರಣವಿಲ್ಲದಾಗ ಅಥವಾ ಇಂದಿನ ಕಾಲದಲ್ಲಿ ತಂದೆ ತಾಯಿ ಭಾರತದಲ್ಲಿದ್ದು ಮಗ ವಿದೇಶದಲ್ಲಿ ನೌಕರಿ ಮಾಡುತ್ತಿರುವಾಗ ಈ ರೀತಿಯ ಸಮಸ್ಯೆಗಳು ಉಂಟಾಗಬಹುದು. ತಂದೆ ತಾಯಿಗಳ ಭೌತಿಕ ಅಗತ್ಯಗಳ ಜೊತೆಗೆ ಅವರ ಮನಸ್ಸನ್ನು ಸಂತುಷ್ಟಗೊಳಿಸುವ ವ್ಯವಸ್ಥೆಯೂ ಆಗಬೇಕೆಂದು ಸೂಕ್ತದ ಇಂಗಿತವಾಗಿದೆ. ಇದಕ್ಕಾಗಿ ಮನುಷ್ಯ ಯಾವ ವಿಧಾನ ಅನುಸರಿಸಬೇಕೆಂದು ನಿರ್ಧರಿಸಲಾಗದು. ಆದರೆ ಇಂತಹ ಪರಿಸ್ಥಿತಿಯಲ್ಲಿ ಏನು ಮಾಡಬೇಕೆಂಬುದನ್ನು ಸ್ವತಃ ಚಿಂತಿಸಬಹುದು.

## ರಕ್ತ ಸಂಬಂಧಿಗಳನ್ನು ಗೌರವಿಸುವುದು

ಪವಿತ್ರ ಕುರ್‌ಆನ್ ತಂದೆ ತಾಯಿ ಮತ್ತು ಹೆಂಡತಿ ಮಕ್ಕಳ ಹಕ್ಕುಗಳ ಜೊತೆಗೆ ರಕ್ತ ಸಂಬಂಧಿಗಳನ್ನು ಗೌರವಿಸುವ ಮತ್ತು ಅವರ ಹಕ್ಕುಗಳನ್ನು ಪೂರೈಸುವ ಆದೇಶ ನೀಡಿದೆ.

وَ اتَّقُوا اللّٰهَ الَّذِيْ تَسَآءَلُوْنَ بِهٖ وَ الْاَرْحَامَ ؕ

ನೀವು ಯಾರ ಹೆಸರನ್ನೆತ್ತಿ ಪರಸ್ಪರ ಹಕ್ಕು ಬಾಧ್ಯತೆಗಳನ್ನು ಕೇಳುತ್ತೀರೋ ಆ ಅಲ್ಲಾಹನನ್ನು ಭಯ ಪಡಿರಿ. (ಪವಿತ್ರ ಕುರ್‌ಆನ್, 4:1)

ಕುರ್‌ಆನ್ ಪ್ರಸ್ತಾಪಿಸಿದ ಸತ್ಯ ವಿಶ್ವಾಸಿಗಳ ವೈಶಿಷ್ಟ್ಯಗಳಲ್ಲಿ ಕುಟುಂಬ ಸಂಬಂಧವೂ ಒಂದಾಗಿದೆ.

وَالَّذِيْنَ يَصِلُوْنَ مَآ اَمَرَ اللّٰهُ بِهٖٓ اَنْ يُّوْصَلَ

ಅಲ್ಲಾಹನು ಯಾವ ಯಾವ ಸಂಬಂಧಗಳನ್ನು ಕಾಪಾಡಲು ಆಜ್ಞೆ ಕೊಟ್ಟಿರುವನೋ ಅವುಗಳನ್ನು ಕಾಪಾಡಿಕೊಳ್ಳುತ್ತಾರೆ। (ಪವಿತ್ರ ಕುರ್‌ಆನ್, 13:21)

ಇದು ಕೇವಲ ಉಪದೇಶವಾಗಿರದೆ ಕಡ್ಡಾಯ ಆಜ್ಞೆಯೆಂದು ಹೇಳಲಾಗಿದೆ.

وَاٰتِ ذَا الْقُرْبٰى حَقَّهٗ وَالْمِسْكِيْنَ وَ ابْنَ السَّبِيْلِ وَ لَا تُبَذِّرْ تَبْذِيْرًا ﴿٢٦﴾

ಸಂಬಂಧಿಕನಿಗೆ ಅವನ ಹಕ್ಕನ್ನೂ, ದರಿದ್ರನಿಗೂ, ಪ್ರಯಾಣಿಕನಿಗೂ ಅವನವನ ಹಕ್ಕನ್ನೂ ಕೊಡಿರಿ. ದುಂದು ವೆಚ್ಚ ಮಾಡಬೇಡಿರಿ. (ಪವಿತ್ರ ಕುರ್‌ಆನ್, 17:26)

ಈ ಸೂಕ್ತದಲ್ಲಿ ಬಹು ಮುಖ್ಯ ವಿಷಯ ಪ್ರಸ್ತಾಪಿಸಲಾಗಿದೆ. ಹಣ ದುರ್ವ್ಯಯ ಮಾಡಿದರೆ, ಸಂಪತ್ತು ವ್ಯರ್ಥಗೊಳಿಸಿದರೆ ಹತ್ತಿರದ ಸಂಬಂಧಿಕರ ಮತ್ತಿತರ ಅರ್ಹರ ಹಕ್ಕುಗಳು ಈಡೇರುವಂತಿಲ್ಲ. ಸಂಪತ್ತಿನ ಖರ್ಚು ನಿಯಂತ್ರಣದಲ್ಲಿದ್ದಾಗ ಮತ್ತು ಹಕ್ಕುದಾರರ ಹಕ್ಕುಗಳನ್ನು ಗುರುತಿಸಿದಾಗ ಮಾತ್ರ ಈ ಹಕ್ಕುಗಳು ಪೂರ್ತಿಯಾಗಬಹುದು.

## ವಾರೀಸು ಕಾನೂನು

ಪವಿತ್ರ ಕುರ್‌ಆನ್ ಸಂಬಂಧಿಕರ ಇತರ ಹಕ್ಕುಗಳೊಂದಿಗೆ ವಾರೀಸು ಸೊತ್ತಿನಲ್ಲಿಯೂ ಅವರ ಹಕ್ಕುಗಳನ್ನು ಇಟ್ಟಿದೆ.

ಸಾಮಾನ್ಯವಾಗಿ ಓರ್ವನ ಮರಣಾನಂತರ ಅವನ ಗಂಡು ಸಂತಾನವನ್ನೇ ಸೊತ್ತಿನ ವಾರೀಸುದಾರರೆಂದು ಪರಿಗಣಿಸಲಾಗುತ್ತದೆ. ಕೆಲವೊಮ್ಮೆ ಅದರಲ್ಲಿಯೂ ಹಿರಿಯ ಮಗನೇ ನೈಜ ವಾರೀಸುದಾರನೆಂದು ಭಾವಿಸಲಾಗುತ್ತದೆ. ಮಹಿಳೆಯರ ಮತ್ತು ಅಪ್ರಾಪ್ತ ಮಕ್ಕಳ ಹಕ್ಕುಗಳನ್ನು ಅಂಗೀಕರಿಸದೆ ಅವರು ಇದರಿಂದ ವಂಚಿತರಾಗುತ್ತಾರೆ. ಪವಿತ್ರ ಕುರ್‌ಆನ್ ಈ ಅನ್ಯಾಯವನ್ನು ಕೊನೆಗೊಳಿಸಿತು. ಅದು ಹೇಳಿತು.

لِلرِّجَالِ نَصِيْبٌ مِّمَّا تَرَكَ الْوَالِدٰنِ وَ الْاَقْرَبُوْنَ ۪ وَ لِلنِّسَآءِ نَصِيْبٌ مِّمَّا تَرَكَ الْوَالِدٰنِ
وَ الْاَقْرَبُوْنَ مِمَّا قَلَّ مِنْهُ اَوْ كَثُرَ ؕ نَصِيْبًا مَّفْرُوْضًا ۝

ಮಾತಾಪಿತರೂ ಆಪ್ತ ಬಂಧುಗಳೂ ಬಿಟ್ಟು ಹೋದ ಸಂಪತ್ತಿನಲ್ಲಿ ಪುರುಷರಿಗೆ ಪಾಲಿದೆ. ಮಾತಾಪಿತರೂ ಆಪ್ತ ಬಂಧುಗಳೂ ಬಿಟ್ಟು ಹೋದ ಸಂಪತ್ತಿನಲ್ಲಿ ಸ್ತ್ರೀಯರಿಗೂ ಪಾಲಿದೆ. ಕಡಿಮೆ ಇರಲಿ ಅಥವಾ ಹೆಚ್ಚಿರಲಿ ಈ ಪಾಲು ನಿಶ್ಚಿತವಾಗಿದೆ. (ಪವಿತ್ರ ಕುರ್‌ಆನ್, 4:7)

ಅಂದರೆ ಒಬ್ಬನು ಮರಣದ ವೇಳೆ ಬಿಟ್ಟು ಹೋದ ಸೊತ್ತು, ಅದು ಹೆಚ್ಚಿದ್ದರೂ ಕಡಿಮೆಯಿದ್ದರೂ ಅದರಲ್ಲಿ ಪುರುಷರಂತೆ ಮಹಿಳೆಯರಿಗೂ ನಿರ್ದಿಷ್ಟ ಪಾಲು ಇದೆ. ಪವಿತ್ರ

ಕುರ್‌ಆನಿನ ವಾರೀಸು ಕಾನೂನಿನ ಬುನಾದಿ ದಾಂಪತ್ಯ ಸಂಬಂಧ ಮತ್ತು ರಕ್ತ ಸಂಬಂಧಗಳಾಗಿವೆ. ಅದರಂತೆ ಪತಿ-ಪತ್ನಿ, ತಂದೆ-ತಾಯಿ ಮತ್ತು ಗಂಡು-ಹೆಣ್ಣು ಸೇರಿ ಎಲ್ಲ ಮಕ್ಕಳು ಕಡ್ಡಾಯವಾಗಿ ಪರಸ್ಪರ ವಾರೀಸುದಾರರಾಗುವರು. ಯಾವುದೇ ಪರಿಸ್ಥಿತಿಯಲ್ಲಿ ಇವರನ್ನು ವಾರೀಸು ಸೊತ್ತಿನಿಂದ ವಂಚಿಸುವಂತಿಲ್ಲ. ಇವರ ಅನುಪಸ್ಥಿತಿ ಅಥವಾ ಇವರಿಗೆ ಪಾಲು ಸಿಕ್ಕಿದ ನಂತರವೇ ಇತರ ಸಂಬಂಧಿಕರಿಗೆ ಹಕ್ಕು ಇರುವುದು.

ಕುರ್‌ಆನ್ ತನ್ನ ಈ ಕಾನೂನಿನಲ್ಲಿ ಮರಣ ಹೊಂದಿದ ವ್ಯಕ್ತಿಯ ನೇರ ಸಂಬಂಧಿಕರಿಗೆ ಪರೋಕ್ಷ ಸಂಬಂಧಿಕರಿಗಿಂತ ಹೆಚ್ಚಿನ ಆದ್ಯತೆ ನೀಡಿದೆ. ಈ ನಿಯಮದಂತೆ ತಂದೆಯ ಉಪಸ್ಥಿತಿಯಲ್ಲಿ ಅಜ್ಜ ಅಥವಾ ಮಗನ ಉಪಸ್ಥಿತಿಯಲ್ಲಿ ಮೊಮ್ಮಕ್ಕಳಿಗೆ ವಾರೀಸು ಹಕ್ಕು ಇರುವುದಿಲ್ಲ. ಸಹೋದರ ಮತ್ತು ಸಹೋದರಿಯರ ಸಂಬಂಧವೂ ತಂದೆಯ ಕಾರಣವಿರುವುದರಿಂದ ತಂದೆಯ ಉಪಸ್ಥಿತಿಯಲ್ಲಿ ಅವರಿಗೆ ಹಕ್ಕು ಇರುವುದಿಲ್ಲ.

## ವಸಿಯ್ಯತ್‌ನ ಹಕ್ಕು

ಒಬ್ಬನಿಗೆ ತನ್ನ ಸೊತ್ತಿನಲ್ಲಿ ವಸಿಯ್ಯತ್ ಮಾಡುವ ಹಕ್ಕಿದೆ. ಅದು ಮರಣಾನಂತರ ಅವನ ಸೊತ್ತಿನ ಒಂದಂಶ. ಧರ್ಮ ಪ್ರಚಾರ, ಮುಸ್ಲಿಮರ ಕಲ್ಯಾಣ ಮತ್ತು ಏಳಿಗೆ, ಅದೇ ರೀತಿಯ ಯಾವುದೇ ಒಳ್ಳೆಯ ಕಾರ್ಯದಲ್ಲಿ ಖರ್ಚು ಮಾಡುವ ಕುರಿತು ಉಯಿಲು ಮಾಡುವುದಾಗಿದೆ. ಇದರ ಒಂದು ಪ್ರಯೋಜನವೇನೆಂದರೆ ವಾರೀಸು ಸೊತ್ತಿನಿಂದ ವಂಚಿತರಾದ ಕುಟುಂಬ ಸದಸ್ಯರ ಆರ್ಥಿಕ ಅವಶ್ಯಕತೆಗಳನ್ನು ಪೂರೈಸಲು ಮತ್ತು ಶಿಕ್ಷಣ ತರಬೇತಿಗಾಗಿಯೂ ವಸಿಯ್ಯತ್ ಮಾಡಬಹುದು. ಪ್ರವಾದಿವರ್ಯರ(ಸ) ಸ್ಪಷ್ಟೀಕರಣದಂತೆ ಸೊತ್ತಿನ 1/3 ಅಂಶ ಮಾತ್ರ ವಸಿಯ್ಯತ್ ಮಾಡಬಹುದು. ಇದರ ಯುಕ್ತಿಯೇನೆಂದರೆ ಅದಕ್ಕಿಂತ ಹೆಚ್ಚು ಸೊತ್ತಿನ ವಸಿಯ್ಯತ್‌ನಿಂದ ವಾರೀಸುದಾರರ ಹಕ್ಕಿಗೆ ಚ್ಯುತಿಯುಂಟಾಗಬಹುದು.

ಪ್ರವಾದಿ(ಸ) ಹೇಳಿದರು - ವಾರೀಸು ಸೊತ್ತಿನಲ್ಲಿ ನೇರವಾಗಿ ಪಾಲು ಪಡೆಯುವ ವಾರೀಸುದಾರರ ಪರವಾಗಿ ವಸಿಯ್ಯತ್ ಮಾಡುವಂತಿಲ್ಲ. ಕುರ್‌ಆನ್ ಮನುಷ್ಯನ ವಸಿಯ್ಯತ್‌ನ ಹಕ್ಕನ್ನು ಅಂಗೀಕರಿಸುತ್ತದೆ. ಅದಕ್ಕೆ ಪ್ರಾಮುಖ್ಯತೆಯನ್ನು ನೀಡಿದೆ. ವಾರೀಸು ನಿಯಮಗಳ ವಿಷಯದಲ್ಲಿ ಒಂದು ಕಡೆ ಹೇಳಲಾಗಿದೆ.

مِنْ بَعْدِ وَصِيَّةٍ يُّوْصٰى بِهَآ اَوْ دَيْنٍ ۙ غَيْرَ مُضَآرٍّ ۚ وَصِيَّةً مِّنَ اللّٰهِ ۗ وَاللّٰهُ عَلِيْمٌ حَلِيْمٌ ﴿١٢﴾

ಮೃತರು ಮಾಡಿದ್ದ ಹಾನಿಕಾರಕವಲ್ಲದ ವಸಿಯ್ಯತನ್ನು ಈಡೇರಿಸಿದ ಮತ್ತು ಸಾಲಗಳನ್ನು ಪಾವತಿ ಮಾಡಿದ ಬಳಿಕ ಉಳಿಯುವ ಒಟ್ಟು ಸೊತ್ತಿನ ಮೂರನೆಯ ಒಂದಂಶದಲ್ಲಿ ಅವರೆಲ್ಲರೂ ಭಾಗಿಗಳಾಗುವರು. ಇವು ಅಲ್ಲಾಹನ ಅಪ್ಪಣೆಗಳು ಮತ್ತು ಅಲ್ಲಾಹ್ ಸರ್ವಜ್ಞನೂ ಸಹನಶೀಲನೂ ಆಗಿರುತ್ತಾನೆ. (ಪವಿತ್ರ ಕುರ್‌ಆನ್, 4:12)

ಇಸ್ಲಾಮೀ ಶಿಕ್ಷಣದಂತೆ ಮೃತ ವ್ಯಕ್ತಿಯ ಸೊತ್ತಿನಿಂದ ಮೊದಲು ಆ ವ್ಯಕ್ತಿಯ ಅಂತ್ಯ ಸಂಸ್ಕಾರದ ವ್ಯವಸ್ಥೆ ಮಾಡಬೇಕು. ಅವನ ಸಾಲವಿದ್ದರೆ ಅದನ್ನು ತೀರಿಸಬೇಕು ಮತ್ತು ಅವನ ವಸಿಯ್ಯತ್ತನ್ನು ಈಡೇರಿಸಬೇಕು. ನಂತರ ಉಳಿದ ಸೊತ್ತು ವಾರೀಸುದಾರರಲ್ಲಿ ಹಂಚಲ್ಪಡಬೇಕು.

# ಉಪ ಸಂಹಾರ

ಇಸ್ಲಾಮ್ ಪ್ರಸ್ತುತ ಪಡಿಸುವ ಕುಟುಂಬ ವ್ಯವಸ್ಥೆ ಒಂದು ಸುಭದ್ರ ವ್ಯವಸ್ಥೆಯಾಗಿದೆ. ಅದು ಪ್ರೀತಿ, ಪ್ರಾಮಾಣಿಕತೆ, ಚಾರಿತ್ರ್ಯ ಮತ್ತು ಕಾನೂನುಗಳ ಆಧಾರದಲ್ಲಿ ಅದನ್ನು ರಚಿಸಿದೆ. ಸಮಾಜವು ಕುಟುಂಬಗಳ ಸಮೂಹವಾಗಿದೆ. ಕುಟುಂಬಗಳ ನೆಲೆಯಲ್ಲಿ ಇಸ್ಲಾಮೀ ಆದೇಶಗಳ ಪಾಲನೆಯಾದರೆ ಇಡೀ ಸಮಾಜದ ಮೇಲೆ ಅದು ಪ್ರಭಾವ ಬೀರಬಹುದು. ಪರಿಸರದಲ್ಲಿರುವ ಸಾಮಾನ್ಯ ಕ್ಷೋಭೆಗಳಿಂದ ಮುಸ್ಲಿಮ್ ಕುಟುಂಬಗಳು ತೀವ್ರಗತಿಯಲ್ಲಿ ಪ್ರಭಾವಿತಗೊಳ್ಳುತ್ತಿವೆ ಮತ್ತು ಇಸ್ಲಾಮೀ ಶಿಕ್ಷಣದ ಬಗ್ಗೆ ನಿರ್ಲಕ್ಷ್ಯತೆ, ವಿಮುಖತೆ ನಿರಂತರ ಹೆಚ್ಚುತ್ತಿವೆ. ಇಂದಿನ ಗಲಭೆಗೊಂದಲದ ಸಮಾಜದ ಮೇಲೆ ನಮ್ಮ ನಿಯಂತ್ರಣವಿಲ್ಲ, ಆದರೆ ಕುಟುಂಬದ ಈ ಸಣ್ಣ ಕ್ಷೇತ್ರದಲ್ಲಿ ಅಲ್ಲಾಹನು ನಮಗೆ ನೀಡಿದ ಖರ್ಚಿನ ಹಕ್ಕು ಮತ್ತು ಅಧಿಕಾರದ ಪೂರ್ಣ ಪ್ರಯೋಜನವನ್ನು ಪಡೆದು ಇಸ್ಲಾಮಿನ ದಿಕ್ಕು ತೋರಿಸಲು ಸಾಧ್ಯವಾದರೆ ಇನ್ಶಾಅಲ್ಲಾಹ್ ಇಡೀ ಸಮಾಜವು ಇದರಿಂದ ಪ್ರಭಾವಿತಗೊಳ್ಳಬಹುದು ಹಾಗೂ ಇಸ್ಲಾಮಿನ ಪ್ರಭಾವ ಎಲ್ಲೆಡೆ ಕಾಣಲು ಸಿಗಬಹುದು.